# ನಾದನೂಪುರ ವಂಡಾರು
# Nadanoopura Vandaru



ಸಂಪ್ರದಾಯದ ದೀವಟಿಗೆ ಬೆಳಕಿನ ಸೌಂದರ್ಯ

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನ ಸಂಪ್ರದಾಯ, ಪರಂಪರೆ–ನಿಬಂಧನೆ, ಚೌಕಟ್ಟುಗಳು–ಒಂದು ಜಿಜ್ಞಾಸೆ
ಸುರತ್ಕಲ್ ಮೇಳ ನಡೆದು ಬಂದ ಹಾದಿ–ಮೇಳ ದರ್ಪಣ
ಕಳಚಿದ ಕಪ್ಪು ಮುಂಡಾಸಿನ ಕೊಂಡಿ–ಆಲೂರು ತೇಜ
ನಮ್ಮ ಲೈಬ್ರರಿ – ಹದಿನೇಳನೆಯ ಶತಮಾನದ ಯಕ್ಷಗಾನ ಪ್ರಸಂಗಗಳು
ದಿನಕರ್ ನಡೂರ್ – ಯಕ್ಷ ಬದುಕಿನ ರಜತ ಸಂಭ್ರಮ

## ತಿಂಗಳ ಹೈಲೈಟ್ಸ್

- ಯಕ್ಷಗಾನ ಸಂಪ್ರದಾಯ, ಪರಂಪರೆ–ನಿಬಂಧನೆ, ಚೌಕಟ್ಟುಗಳು–ಒಂದು ಜಿಜ್ಞಾಸೆ
- ಲಾಟ್ರಿ ಹೊಡೀತು, ಮೇಳ ಎದ್ದಿತು–ಸುರತ್ಕಲ್ ಮೇಳ ನಡೆದು ಬಂದ ಹಾದಿ–ಮೇಳ ದರ್ಪಣ
- ಕಳಚಿದ ಕಪ್ಪು ಮುಂಡಾಸಿನ ಕೊಂಡಿ–ಆಲೂರು ತೇಜ
- ಹದಿನೇಳನೆಯ ಶತಮಾನದ ಯಕ್ಷಗಾನ ಪ್ರಸಂಗಗಳು
- ದಿನಕರ್ ನಡೂರ್ – ಯಕ್ಷ ಬದುಕಿನ ರಜತ ಸಂಭ್ರಮ

## ಬೋರ್ಡ್ ರೂಂ

*ನಮಸ್ಕಾರ ಓದುಗರೇ,*

**ಯ**ಕ್ಷಗಾನ ಕಲೆಯನ್ನು ಹಿರಿಯರೇ ಹಲವೆಡೆ ಉಲ್ಲೇಖಿಸಿದ ಹಾಗೆ ಇದು ಜಾನಪದ ಹಿನ್ನಲೆಯಿಂದ ಬೆಳೆದು ಬಂದ ಕಾರಣ ವ್ಯವಸ್ಥಿತ ಶಿಕ್ಷಣ ಕ್ರಮವಿಲ್ಲದೇ ಹೋದರೂ, ಯಕ್ಷಗಾನದ ಹೆಜ್ಜೆಗಾರಿಕೆ ಕಲಿಸುತ್ತಿದ್ದ ಗುರುವಿನ ಮನೆ, ಜಗಲಿ, ಚಾವಡಿ, ಕೊಠಡಿಗಳೇ ಕಲಿಕಾ ಕೇಂದ್ರಗಳು. ಯಕ್ಷಗಾನಕ್ಕೆ ನಿರ್ದಿಷ್ಟ ಪಠ್ಯ ಇಲ್ಲ. ಆದರೆ ನಿರ್ದಿಷ್ಟ ವಿಧಾನ, ನಡೆ, ಕ್ರಮಗಳಿವೆ. ಕಲಾವಿದನೊಬ್ಬ ಎಲ್ಲವನ್ನೂ ಅಭ್ಯಾಸದ ಅವಧಿಯಲ್ಲೇ ಕಲಿತು ಪೂರ್ಣ ಸಿದ್ಧನಾಗಿ ರಂಗವೇರಿದ ಉದಾಹರಣೆ ಇಲ್ಲ. ರಂಗಸ್ಥಳ ಏರಿದ ಮೇಲೆಯೇ ಕಲಾವಿದನೊಬ್ಬ ಅನುಭವದ ಮೇಲೆ ಪಕ್ವತೆ ಸಾಧಿಸುತ್ತಾ ಹೋಗುವುದು. ಕಲಾವಿದ ಕಲಾ ಜೀವನದದ್ದ ಕಲಿಯಬೇಕಾದ, ತಿಳಿದುಕೊಳ್ಳಬೇಕಾದ ಸಂಗತಿಗಳು ಸಾಕಷ್ಟಿವೆ. ಇಲ್ಲಿ ಒಬ್ಬ ಗುರು ಹೇಳಿಕೊಟ್ಟದ್ದೇ ಶಿಕ್ಷಣವಾಗಿರುವುದಿಲ್ಲ. ಪ್ರತಿದಿನ ಪಡೆದುಕೊಂಡ ಅನುಭವವೂ ಶಿಕ್ಷಣವಾಗಿರುತ್ತದೆ, ಹತ್ತಿಪ್ಪತ್ತು ವರ್ಷಗಳ ಹಿಂದೆ ತಾಂತ್ರಿಕವಾಗಿ ಅನುಕೂಲತೆ, ಸೌಲಭ್ಯಗಳು ಕಡಿಮೆ ಇದ್ದದ್ದರಿಂದಲೋ ಏನೋ, ಕಲಾವಿದರಿಗೆ ವೇಷ ಮುಗಿದ ಮೇಲೆ ಮೇಳದದಲ್ಲಿಯೋ ಉಳಿದುಕೊಳ್ಳುವ ಅವಕಾಶಗಳು ಹೆಚ್ಚಿದ್ದವು. ಇದರಿಂದ ರಂಗಸ್ಥಳದ ಮೇಲಿನ, ಚೌಕಿಯ ಒಳಗಿನ, ರಂಗಸ್ಥಳದ ಹಿಂದಿನ ಕಲಿಕೆಗಳು, ಅನುಭವಗಳು ಸಾಕಷ್ಟು ಆಗುತ್ತಿದ್ದವು. ಆದ್ರೆ ಈಗ ಹಾಗಿಲ್ಲ. ಹೆಚ್ಚಿನ ಕಲಾವಿದರು ಸ್ವಂತ ವಾಹನಗಳನ್ನು ಹೊಂದಿರುವುದರಿಂದ ಸ್ವಂತ ಗೂಡನ್ನು ಬೇಗನೆ ಸೇರಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಹೆಚ್ಚಾಗಿ ಪ್ರದರ್ಶನಗೊಂಡ ಹಲವು ಪುರಾಣ ಪಾತ್ರಗಳ ತಯಾರಿಗೆ ಯೂ–ಟ್ಯೂಬ್ ಅಪ್ ಲೋಡ್ ಗಳು ಮಾಹಿತಿ ನೀಡುತ್ತವೆ. ಕೆಲವೊಂದು ಬಾರಿ ಮಾತ್ರ ಪಾತ್ರಕ್ಕೆ ಹೆಚ್ಚಿನ ಶ್ರಮ ಅಧ್ಯಯನ ಬೇಕಾಗುತ್ತದೆ. ಯಕ್ಷಗಾನದ ವಿವಿಧ ವಿಭಾಗಗಳಲ್ಲಿ ಹೊಸತನ ಅಳವಡಿಕೆಯಾಗಿ ಪ್ರಮುಖ ಬದಲಾವಣೆಗಳಿಗೆ ಕಾರಣವಾಗಿದೆ. ಕೆಲ ಕಲಾವಿದರಿಗೆ ಒಂದೇ ದಿನ ೨–೩ ಕಾರ್ಯಕ್ರಮಗಳು ಸಿಗುತ್ತಿವೆ. ಈ ಎಲ್ಲಾ ಕಾರಣಗಳಿಂದ, ಮೇಳದಲ್ಲೇ ಕಾಲ ಕಳೆಯುವ ಅವಕಾಶ, ಹಿರಿಯ ಕಲಾವಿದರ ಒಡನಾಟದ ವ್ಯವಸ್ಥೆಯಿಂದ ಇಂದಿನ ಕಲಾವಿದರು ಸ್ವಲ್ಪ ವಂಚಿತರಾಗಿರುವುದು ನಿಜವೇ. ಆದರೂ ವೃತ್ತಿಪರ ಮೇಳದ ಖಾಯಂ ಕಲಾವಿದರಾದವರು, ಯಕ್ಷಗಾನದಲ್ಲೇ ವೃತ್ತಿ ಬದುಕು ರೂಪಿಸಿಕೊಳ್ಳಲು ಬಯಸುವವರು ಯಕ್ಷಗಾನ ಕಲೆಯ ಒಂದಷ್ಟು ಮುಖ್ಯ ವಿಚಾರಗಳು (ರಂಗದ ಮೇಲಿನ ನಿರ್ವಹಣೆಯನ್ನು ಹೊರತು ಪಡಿಸಿಯೂ) ಹಿಂದಿನಿಂದ ನಡೆದು ಬಂದ ಪದ್ಧತಿಗಳು ಇವುಗಳ ಬಗ್ಗೆ ಪ್ರತೀ ಕಲಾವಿದರು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಾದದ್ದು ಬಹಳ ಮುಖ್ಯ. ಇದು ನಮಗೆ ಕಲೆಯ ಮೇಲಿರುವ ಪ್ರೀತಿ ಗೌರವವನ್ನು ತೋರಿಸುತ್ತದೆ. ನಮ್ಮ ಕಲೆಯ ಬಗ್ಗೆ ನಾವೇ ಮಾಹಿತಿ ತಿಳಿದುಕೊಂಡಿರದಿದ್ದರೆ ನಾಳೆ ಇದರ ಬಗ್ಗೆ ಯಾರೋ ಕೇಳಿದಾಗ ಏನುತ್ತರ ನೀಡಲು ಸಾಧ್ಯ ಅಲ್ಲವೇ? ಅದಕ್ಕಾಗಿ ಮೇಳದಲ್ಲಿ ಒಂದಷ್ಟು ಕಾಲ ಕಳೆಯುವ ಅಭ್ಯಾಸ ಕಲಾವಿದರಿಗೆ ಬೇಕು. ಚೌಕಿಯಲ್ಲಿ ಚರ್ಚೆಗಳು ನಡೆಯಬೇಕು.. ಯುವ ಕಲಾವಿದರಿಗೆ



**ಗೋವಿಂದ ವಂಡಾರು**

ಗೊತ್ತಿಲ್ಲದ ಉತ್ತಮ ವಿಚಾರಗಳನ್ನು ಹಿರಿಯರು ಕಿರಿಯರೊಂದಿಗೆ ಹಂಚಿಕೊಳ್ಳಬೇಕು. ಕಲಾವಿದರ ನಡುವೆ ಪರಸ್ಪರ ಸೌಹಾರ್ದ ಸಂಬಂಧವಿರಬೇಕು. ಕಿರಿಯರೂ ಮುಕ್ತವಾಗಿ ಮನಬಿಚ್ಚಿ ಸಂಶಯಗಳನ್ನು ಕೇಳಬೇಕು. ಹೆಸರು, ಪ್ರಸಿದ್ಧಿ ಬಂದಾಕ್ಷಣ ಎಲ್ಲವನ್ನೂ ತಿಳಿದುಕೊಂಡಿದ್ದೇವೆ ಎನ್ನುವುದು ತಪ್ಪು. ರಂಗಸ್ಥಳ ಕಟ್ಟುವ ಜಾಗದಿಂದ ಹಿಡಿದು, ರಂಗಪ್ರದರ್ಶನದವರೆಗೂ ವಿವಿಧ ಹಂತಗಳಲ್ಲಿ ಕೆಲವೊಂದು ನಿಯಮ ಪದ್ಧತಿಗಳಿವೆ, ಚೌಕಿ ಕಟ್ಟುವವನಿಂದ ಹಿಡಿದು ಭಾಗವತರವರೆಗೂ ಹಲವು ಅನುಭವಗಳಿರುತ್ತವೆ. ಇವನ್ನೆಲ್ಲ ತಿಳಿದುಕೊಳ್ಳುವ ಪ್ರಯತ್ನ ಕಲಾವಿದರು ಮಾಡಬೇಕಿದೆ. ತೆಂಕಿನ ರಂಗಸ್ಥಳಕ್ಕೂ ಬಡಗಿನ ರಂಗಸ್ಥಳಕ್ಕೂ ವ್ಯತ್ಯಾಸ ಹೇಗಿದೆ? ಯಾಕಿದೆ? ಎತ್ತರದಲ್ಲಿ ಹೆಚ್ಚು ಕಡಿಮೆ ಯಾಕೆ? ರಂಗಸ್ಥಳದ ಅಗಲ ಸಾಮಾನ್ಯವಾಗಿ ಎಷ್ಟಿರುತ್ತದೆ, ಒಬ್ಬ ಕಲಾವಿದ ರಂಗಸ್ಥಳವನ್ನು ಎಷ್ಟರ ಮಟ್ಟಿಗೆ ಆವರಿಸಿಕೊಳ್ಳಬಹುದು? ರಂಗಸ್ಥಳ ಯಾವ ದಿಕ್ಕಿಗಿರಬೇಕು? ಚೌಕಿ ಮನೆ ಎಲ್ಲಿರಬೇಕು? ಹಾಸ್ಯಗಾರನಿಗೆ ಯಾಕೆ ರಂಗಸ್ಥಳದ ಪಕ್ಕವೇ ವೇಷ ಮಾಡಿಕೊಳ್ಳಲು ಅವಕಾಶ? ರಂಗಸ್ಥಳ ಸಹಾಯಕನ ಉಡುಗೆ ಹೇಗಿರಬೇಕು? ಈ ಬಗ್ಗೆ ಕೆಲವು ಕಲಾವಿದರಿಗೆ ತಿಳಿದೇ ಇರುವುದಿಲ್ಲ. ಇದೆಲ್ಲವನ್ನೂ ಯಾರೂ ಶಿಕ್ಷಣದ ಭಾಗವಾಗಿ ಹೇಳಿಕೊಡುವುದಿಲ್ಲ. ಹಿರಿಯರು ಪಾಲಿಸಿಕೊಂಡು ಬರುವುದನ್ನು ನೋಡಿ ಕಿರಿಯರು ತಿಳಿದುಕೊಳ್ಳಬೇಕು.. ಹಾಗಾಗಿ ನೋಡಿ ಕಲಿಯುವ ಪ್ರಕ್ರಿಯೆಯನ್ನು ಕಲಾವಿದ ಮೈಗೂಡಿಸಿಕೊಳ್ಳಬೇಕು. ಅಂಥ ಕೆಲವು ವಿಷಯಗಳ ಬಗ್ಗೆ ಈ ಬಾರಿಕೆ ಸಂಚಿಕೆಯಲ್ಲಿ ಹಿರಿಯರಾದ ಎಂಕೆ ರಮೇಶ್ ಆಚಾರ್ ಬರೆದಿದ್ದಾರೆ. ಬಹುಶಃ ದಾಖಲೆಯಾಗಬೇಕಾದ ಮಾಹಿತಿಗಳಲ್ಲಿ ಈ ವಿಷಯವೂ ಒಂದು.. ಇಂತಹ ಅಪರೂಪದ ಮಾಹಿತಿಗಳು ಯಕ್ಷಗಾನ ಪ್ರೇಕ್ಷಕರ, ಕಲಾವಿದರ ಕುತೂಹಲ, ಆಸಕ್ತಿ ಕೆರಳಿಸುವಂತಾಗಲಿ ***–ನಿಮ್ಮವನೆ ಗೋವಿಂದ ವಂಡಾರು***

---

**ಸಂಪಾದಕೀಯ**

***ಆತ್ಮೀಯ ಓದುಗರೆ,***

ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸೋವಲ್ಲಿ ಬದಲಿಸೋವಲ್ಲಿ, ಒಂದು ಸಮಸ್ಯೆ, ಸುದ್ದಿಯನ್ನು ವಿಶಾಲ ಸಮಾಜಕ್ಕೆ ತಲುಪಿಸೋವಲ್ಲಿ ಪತ್ರಿಕೆ ಒಂದು ಪ್ರಭಾವಶಾಲಿ ಮಾಧ್ಯಮ. ಪತ್ರಿಕೋದ್ಯಮ, ಸೋಶಿಯಲ್ ಮೀಡಿಯಾದಂತಹಾ ಫಾಸ್ಟ್ ಕನೆಕ್ಟಿಂಗ್ ಮಾಧ್ಯಮಗಳು ಅತಿ ಹೆಚ್ಚು ಬಳಕೆಯಲ್ಲಿದ್ದರೂ ಇಂದಿಗೂ ಪತ್ರಿಕಾ ರಂಗ ತನ್ನ ಗಟ್ಟಿತನ, ಅಸ್ಥಿತ್ವವನ್ನು ವಿಶೇಷವಾಗಿ ಗುರುತಿಸಿಕೊಂಡಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಅದರದ್ದೇ ಆದ ಜರ್ನಲ್ ಗಳು, ಪತ್ರಿಕಾ ವರದಿ, ಸುದ್ದಿಗಳು ಆಯಾ ಕ್ಷೇತ್ರಕ್ಕೆ ಪೂರಕವಾಗಿ ದುಡಿಯುತ್ತಿವೆ. ರಾಜಕೀಯಕ್ಕೆ, ಕಾರ್ಪೋರೇಟ್ ಸೆಕ್ಟರ್ ಗೆ, ಸಿನಿಮಾ ರಂಗಕ್ಕೆ, ಅಭಿವೃದ್ಧಿ ಕ್ಷೇತ್ರಕ್ಕೆ ಸೇವಾ ಕ್ಷೇತ್ರಕ್ಕೆ, ವೈದ್ಯಕೀಯ, ತಾಂತ್ರಿಕ, ಕ್ಷೇತ್ರಗಳಿಗೆ ಸಂಬಂಧಿಸಿದ ನಿಯತಕಾಲಿಕಗಳು ಸಕ್ರಿಯವಾಗಿ ಆ ಕ್ಷೇತ್ರದ ಮುಖವಾಣಿಯಾಗಿ ಕೆಲಸ ಮಾಡುತ್ತವೆ. ಹಾಗೆಯೇ ಯಕ್ಷಗಾನ ಕ್ಷೇತ್ರವೂ ತನ್ನದೇ ಆದ ಪತ್ರಿಕಾ ರಂಗವನ್ನು ಬೆಳೆಸಿಕೊಂಡು ಬಂದಿದೆ. ಯಕ್ಷಗಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಲೇಖನಗಳು, ಪ್ರಬಂಧಗಳು, ಸಂಶೋಧನಾ ಗ್ರಂಥಗಳು, ಕೃತಿಗಳು ಸಾಕಷ್ಟು ರಚನೆಯಾಗಿವೆ. ಆದರೆ ಈ ಕ್ಷೇತ್ರದ ಒಂದೇ ಒಂದು ಕೊರತೆ ಎಂದರೆ ಓದುಗರ ಅಭಾವ. ಬೇರೆ ಕ್ಷೇತ್ರದ ಪತ್ರಿಕೆಗಳು ಸಮಾಜ ಹಾಗೂ ಆಡಳಿತಗಾರರ ಮೇಲೆ ಪ್ರಭಾವ ಬೀರುವಲ್ಲಿ ಹಾಗೂ ವಲಯದ ಅಭಿವೃದ್ಧಿಯ ಕುರಿತು ಚಿಂತನೆ ನಡೆಸುವಲ್ಲಿ ಬಲವಾದ ದನಿಯಾಗಿದ್ದರೆ, ಯಕ್ಷಗಾನ ಪತ್ರಿಕೆಗಳ ದನಿ ಕ್ಷೀಣ ಎಂದೆ ಪರಿಗಣಿಸಬಹುದು. ಯಕ್ಷಗಾನದ ಪತ್ರಿಕೆಗಳನ್ನು ಕೊಳ್ಳುವವರು ಕಡಿಮೆ. ಆದಾಯದ ದೃಷ್ಟಿಯಲ್ಲಿ ಗಳಿಕೆಯಿಲ್ಲ. ಪತ್ರಿಕೆಯನ್ನು ಬೆಂಬಲಿಸುವ ಜಾಹೀರಾತುದಾರರ ಕೊರತೆಯಿದೆ. ಪತ್ರಿಕೆ ಎಂಬುದು ಜ್ಞಾನಾಭಿವೃದ್ಧಿಗೆ, ವಿಷಯಗಳ ಪ್ರಸಾರಕ್ಕೆ ಕ್ಷೇತ್ರದ ಅಭಿವೃದ್ಧಿಗೆ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ಸರ್ಕಾರವನ್ನು ಪ್ರಭಾವಿಸುವುದಕ್ಕೆ ಹಾಗೂ ಇದೇ ವಲಯದ ಜನರ ನಡುವೆ ಸಂಪರ್ಕ ಸಂಬಂಧ ಸಾಧಿಸುವುದಕ್ಕೆ. ಇದೇ ಕ್ಷೇತ್ರದ(ಯಕ್ಷಗಾನದ) ಪತ್ರಿಕೆಗಳು ಇದೇ ಕ್ಷೇತ್ರದ ಜನರಿಗೆ ಅಪರಿಚಿತ ಎನ್ನುವುದು ಬೇಸರದ ಸಂಗತಿ.. ಯಕ್ಷಗಾನ ಕ್ಷೇತ್ರದಲ್ಲಿ ದುಡಿಯುವ, ಕಲೆಯನ್ನು ಪ್ರೇಮಿಸುವ, ಇದರ ಬಗೆಗಿನ ಜ್ಞಾನ ಬಯಸುವ ಪ್ರತಿಯೊಬ್ಬರೂ ಯಕ್ಷಗಾನದ ಪತ್ರಿಕೆಗಳನ್ನು ಕೊಂಡುಕೊಳ್ಳಬೇಕು. ಓದಬೇಕು. ಸಮಯವಿದ್ದರೆ ನಾವೂ ಅದರ ಭಾಗವಾಗಬೇಕು. ಜ್ಞಾನ ವಿಸ್ತಾರ ಮಾಡಿಕೊಳ್ಳುವಂತಹಾ ಅತ್ಯುತ್ತಮ ಲೇಖನಗಳು ಯಕ್ಷಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಗಮನಿಸಿದಂತೆ ಇಲ್ಲಿಯವರೇ(ಕಲೆಗೆ ಸಂಬಂಧಿಸಿದವರು) ಇನ್ನಿತರ ಸುದ್ದಿ ಮಾಧ್ಯಮಗಳಲ್ಲಿ ಬರೋವಂಥ ಯಕ್ಷಗಾನದ್ದೇ ಸುದ್ದಿಗಳನ್ನು ಇಷ್ಟಪಡಬಲ್ಲರು. ಆದರೆ ಈ ಕಲೆಯ ಪತ್ರಿಕೆಗಳೆಂದರೆ ಇದೇ ಕ್ಷೇತ್ರದವರಿಗೆ ಅನಾದರ. ಖಂಡಿತವಾಗಿ ಯಕ್ಷಗಾನದ ವಿವಿಧ ಕಾಲಘಟ್ಟದ ಸುದ್ದಿ, ಮಾಹಿತಿಗಳನ್ನು ಆಧಾರಸಹಿತವಾಗಿ ಕಾಪಿಡಬಲ್ಲ ಪ್ರಮುಖ ದಾಖಲೆ ಯಕ್ಷಪತ್ರಿಕೆಗಳು. ಇದು ಭವಿಷ್ಯತ್ತಿಗಾದರೂ ವರ್ತಮಾನಕ್ಕೆ, ಕ್ಷೇತ್ರದ ಬೇಕು ಬೇಡಗಳ ಬಗ್ಗೆ ದನಿಯಾಗುವ ಸಾಮಾಜಿಕ ವಲಯವನ್ನು ಪ್ರಭಾವಿಸಬಲ್ಲ ಶಕ್ತಿ ಯಕ್ಷಪತ್ರಿಕೆಗಳಿಗೂ ಬರಬೇಕೆಂದರೆ ಅಂತಹ ಶಕ್ತಿಯನ್ನು ತುಂಬಬೇಕಾದವರು ಓದುಗರು. ಯಾವುದೇ ಪತ್ರಿಕೆ ಗಟ್ಟಿಯಾಗಿ ನಿಲ್ಲದೇ ಹೋದಾಗ ಅಸ್ಥಿತ್ವವನ್ನು ಕಳಚಿಕೊಳ್ಳುತ್ತದೆ. ದೀರ್ಘ ಕಾಲ ಬಾಳುವುದಿಲ್ಲ. ಯಕ್ಷಗಾನ ಕಲಾ ಪತ್ರಿಕೆಗಳು ಉಳಿಯಬೇಕಾದರೆ ಓದುಗರು ಹೆಚ್ಚಾಬೇಕು ಎಂಬ ನಿರೀಕ್ಷೆ ಬಹು ಕಾಲದ್ದು..

***ಸಂಪಾದಕರು***

---

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ–** 9482847978. **ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

***ನಿಮಗಿದು ಗೊತ್ತೇ?:*** ಕರ್ನಾಟಕ ಸಂಗೀತದ ಪಿತಾಮಹ ಎನಿಸಿಕೊಂಡ **ದಾಸವರೇಣ್ಯ ಪುರಂದರದಾಸರು** ಪ್ರಸಂಗ ರಚನೆ ಮಾಡಿದ ಮಾಹಿತಿ ಲಭ್ಯವಿದೆ. ಇವರು ಬರೆದಿರುವ ಪ್ರಸಂಗದ ಹೆಸರು – **ಅನಸೂಯಾ ಕಥೆ.** ಪ್ರಸಂಗ ಪ್ರತಿ ಲಭ್ಯವಿಲ್ಲ. (ಮಾಹಿತಿ: ಕರ್ನಾಟಕ ಯಕ್ಷಗಾನ ಕವಿಚರಿತ್ರೆ)

# ಯಕ್ಷಗಾನ ಸಂಪ್ರದಾಯ, ಪರಂಪರೆ–ನಿಬಂಧನೆ, ಚೌಕಟ್ಟುಗಳು–ಒಂದು ಜಿಜ್ಞಾಸೆ

**ಯ**ಕ್ಷಗಾನ ಕಲೆ ಆಸ್ತಿಕರ ಆಸ್ತಿ, ಕಲಾಪ್ರೇಮಿಗಳ ಕೂಸು. ರಾಷ್ಟ್ರೀಯ ಕಲೆಯೆಂದು ಗುರುತಿಸಲು ಅರ್ಹತೆಯುಳ್ಳ ಸತ್ವಪೂರ್ಣ ಕಲೆ. ಈ ಕಲೆಯಲ್ಲಿ ಪೂರ್ವದಿಂದಲೂ ರೂಢಿಗೆ ಬಂದಿರುವ ಕೆಲವೊಂದು ವಿಶಿಷ್ಟ ಸಂಪ್ರದಾಯಗಳನ್ನು ಕಾಣಬಹುದು. ಕೆಲವು ಸಂಪ್ರದಾಯಗಳು ಕಲೆಯ ಸೌಂದರ್ಯವನ್ನು ಹೆಚ್ಚಿಸಿದರೆ, ನಿರ್ಲಕ್ಷಿಸಬಹುದಾದ ಕೆಲವು ಪೊಳ್ಳು ಆಚರಣೆಗಳೂ ಕಂಡು ಬರುತ್ತವೆ. ಈ ಸಂಪ್ರದಾಯಗಳನ್ನು ನಿಯಮಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶ ಈ ಲೇಖನದ್ದು.

ಯಕ್ಷಗಾನ ಜಾನಪದ ಕಲೆ ಮಾತ್ರವಲ್ಲದೆ ಆರಾಧನ ಕಲೆಯಾಗಿಯೂ ಬೆಳೆದು ಬಂತು. ಇದಕ್ಕೆ ಕಾರಣ ಹೆಚ್ಚಿನ ಎಲ್ಲಾ ಮೇಳಗಳು ತೆಂಕುತಿಟ್ಟೇ ಇರಲಿ, ಬಡಗು ತಿಟ್ಟೇ ಇರಲಿ, ಬಡಾ ಬಡಗುವಾದರೂ ಮೇಳಗಳು ಒಂದೊಂದು ದೇವಸ್ಥಾನದಿಂದಲೇ ಪ್ರಾರಂಭವಾದವು. ತೆಂಕಿನಲ್ಲಿ ಧರ್ಮಸ್ಥಳ, ಕಟೀಲು, ಬಪ್ಪನಾಡು, ಸಸಿಹಿತ್ಲು, ಸುಂಕದಕಟ್ಟೆ, ಇರಾ ಸೋಮನಾಥೇಶ್ವರ, ಸುರತ್ಕಲ್, ಮಂಗಳಾದೇವಿ, ಎಡನೀರು, ಹನುಮಗಿರಿ ಇತ್ಯಾದಿ ಮೇಳಗಳು ಇನ್ನು ಬಡಗಿನಲ್ಲಿ ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಪೆರಡೂರು, ಸಾಲಿಗ್ರಾಮ, ಕಮಲಶಿಲೆ, ಸೌಕೂರು, ಹಾಲಾಡಿ, ಮಡಾಮಕ್ಕಿ, ಇಡಗುಂಜಿ ಶಿರಸಿ ಎಲ್ಲಾ ಮೇಳಗಳು ದೇವಳದ ವತಿಯಿಂದಲೇ ಪ್ರಾರಂಭವಾದದ್ದು. ಇನ್ನು ಘಟ್ಟದ ಮೇಲೆ ಮೇಗರವಳ್ಳಿ ಮಹಿಷಿ, ರಂಜದಕಟ್ಟೆ, ಬಾಳೆಹೊಳೆ, ಹೊಸಳ್ಳಿ, ಎಡೆಹಳ್ಳಿ, ಅಲ್ಲೇ ಮೊದಲಾದ ಮೇಳಗಳಿಗೂ ದೇವಸ್ಥಾನಗಳೇ ಆಧಾರ.

## ಪರಂಪರೆ, ಸಂಪ್ರದಾಯ

ಜನರ ನಂಬಿಕೆ, ಶ್ರದ್ಧೆ, ಭಕ್ತಿ, ಮೇಳಗಳ ಉಳಿವಿಗೆ ಕಾರಣ ಎನ್ನಬಹುದು. ರಂಗಸ್ಥಳ ಹಿಮ್ಮೇಳ ಮುಮ್ಮೇಳ, ಚೌಕಿಯೊಳಗೆ ಸಂಪ್ರದಾಯವಾಗಿ ಬೆಳೆದು ಬಂದು ಕೆಲವು ಪರಿಪಾಠಗಳಿವೆ. ಆಸ್ತಿಕರಾದ ನಾವು ಹಿರಿಯರು ಆಚರಿಸಿಕೊಂಡು ಬಂದ ರೀತಿಯನ್ನು ಒಪ್ಪಿ ಅನುಸರಿಸುತ್ತೇವೆ. 'ಶಾಸ್ತ್ರಾತ್ ರೂಢೀರ್ಬಲಿಯಸಿ' ಎಂಬ ಮಾತೊಂದಿದೆ. ಶಾಸ್ತ್ರಕ್ಕಿಂತ ರೂಢಿಗೆ ಬೆಲೆ, ಬಲ ಹೆಚ್ಚು.
ಬಹಳ ಹಿಂದೆ ಆಟ ಆಡಿಸುವ ದಿನದಂದು, ಆಟ ಆಡಿಸುವ ಮನೆಯಲ್ಲಿ ದುರ್ಗಾ ನಮಸ್ಕಾರ ಪೂಜೆ ನಡೆಯಬೇಕಿತ್ತು. ಅಲ್ಲದೆ ಸಂಜೆಯೇ ರಂಗಕ್ಕೆ ಕುರುದಿ ನೀರು ಹಾಕಿ ಶುದ್ಧಗೊಳಿಸುವ ಸಂಪ್ರದಾಯವಿತ್ತು. ಶ್ರೀದೇವಿ ಪಾತ್ರಧಾರಿ ಒಪ್ಪೊತ್ತು ಉಪವಾಸ ಮಾಡಿ ಶ್ರಿ ಲಲಿತಾ ಸಹಸ್ರನಾಮ, ಸಪ್ತಶತಿ ಪಾರಾಯಣ ಪಠಿಸಬೇಕಿತ್ತು. ಅದಕ್ಕೆ ಸಂಬಂಧಿಸಿದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಮಹಿಷಾಸುರ ಪಾತ್ರದಾರಿಯೂ ಸಸ್ಯಾಹಾರ ಮಾತ್ರ ಸೇವಿಸುತ್ತಿದ್ದರು ಎಂಬುದು ಐತಿಹ್ಯ. ಈಗ ಆ ಸಂಪ್ರದಾಯಗಳು ಕಣ್ಮರೆಯಾಗಿವೆ.

ಶ್ರೀದೇವಿ ಮಹಾತ್ಮೆ ಪ್ರಸಂಗದಲ್ಲಿ ಮಹಿಷಾಸುರನ ವಧೆಯಾದಾಗ, ಚಂಡ ಮುಂಡರು, ರಕ್ತಬೀಜ, ಶುಂಭಾಸುರರ ವಧೆಯಾದಾಗ ಕುಂಬಳಕಾಯಿ ಕಡಿಯುವ ಪದ್ಧತಿ ಇದೆ. ಅದೇ ಬೇರೆ ಪ್ರಸಂಗದಲ್ಲಿ ರಾಕ್ಷಸರು ಸತ್ತಾಗ ಕುಂಬಳಕಾಯಿ ಕಡಿಯೋದಿಲ್ಲ ಯಾಕೆ ಇದಕ್ಕೆ ಉತ್ತರ ಕಷ್ಟ. ಕುಂಬಳಕಾಯಿ ಕಡಿಯುವುದು ಅನಿಷ್ಟ ನಿವಾರಣೆಗೆ ಇದು ಒಪ್ಪುವಂಥದ್ದೆ. ಎಲ್ಲವೂ ನಂಬಿಕೆಯ ಮೇಲಿದೆ. ಹಾಗೆಂದು ದೇವಿ ಮಹಾತ್ಮೆ ಪ್ರಸಂಗದಲ್ಲಿ ಕುಂಬಳಕಾಯಿ ಕಡಿಯದೆ ಇದ್ದರೆ ಮರುದಿನ ಮೇಳದಲ್ಲಿ ಏನಾದರೂ ಸಣ್ಣ ತೊಂದರೆಯಾದರೂ ಆಗೇ ಆಗುತ್ತದೆ




ಇದು ನಾ ಕಂಡ ಸತ್ಯ. 1950ಕ್ಕೂ ಕೆಲ ವರ್ಷಗಳ ಮೊದಲು ಕಾಸರಗೋಡು ಬಳಿಯ ಕೊರಕ್ಕೊಡು ಮೇಳದ ಮೂರು ದಿನದ ದೇವಿಮಹಾತ್ಮೆ ಆಟದಲ್ಲಿ ಮಹಿಷಾಸುರ ವೇಷಧಾರಿಯು ದೇವಸ್ಥಾನದ ದ್ವಾರದ ಕಲ್ಲಿಗೆ ತಲೆ ಹೊಡೆದುಕೊಂಡು ಅಸು ನೀಗಿದ್ದರ ಸುದ್ದಿ ಕೇಳಿದ ನೆನಪು. ದೇವಿ ಮಹಾತ್ಮೆ ಆಟ ಆಡಿಸುವುದೇ ಭಕ್ತಿಯಿಂದ. ಹಾಗಾಗಿ ಇರಲೂಬಹುದು. ಪ್ರಾದೇಶಿಕವಾಗಿ ಆಚಾರಗಳಲ್ಲಿ ವ್ಯತ್ಯಾಸವಿರುವಂತೆ ಇದು ಕೂಡ ಒಂದು ನಂಬಿಕೆ. ಸಂಪ್ರದಾಯ.

ಯಕ್ಷಗಾನ ಪ್ರಾರಂಭವಾಗುವುದಕ್ಕಿಂತ ಮೊದಲು ರಂಗಸ್ಥಳದ ಎರಡು ಬದಿಗಳಲ್ಲಿ ಬೆಂಕಿಯ ದೊಂದಿ ಇಡುವ ಕ್ರಮವಿದೆ. ಇದು ಬೆಳಗಿನವರೆಗೂ ನಂದಬಾರದು ನಂಬಿಕೆಯೂ ಇದೆ. ಇದನ್ನು ಕೆಲವೊಂದು ಬಯಲಾಟ ಮೇಳಗಳಲ್ಲಿ ಈಗಲೂ ಪಾಲಿಸಿಕೊಂಡು ಬರುತ್ತಿದ್ದಾರೆ. ಟೆಂಟ್ ಮೇಳದಲ್ಲಿ ಈ ಸಂಪ್ರದಾಯ ಕಣ್ಮರೆಯಾಗಿದೆ.
ರಂಗಸ್ಥಳ ಯಾವ ದಿನ, ಯಾವ ದಿಕ್ಕಿನೆಡೆ ಮುಖ ಮಾಡಿ ಇರಬೇಕು ಇದಕ್ಕೂ ಒಂದು ನಿಯಮವಿದೆ. ಭಾನುವಾರ, ಗುರುವಾರ–ಪೂರ್ವ ರಾಹು, ಸೋಮವಾರ–ದಕ್ಷಿಣ ರಾಹು, ಮಂಗಳವಾರ–ಪಶ್ಚಿಮ ರಾಹು, ಬುಧವಾರ–ಉತ್ತರ ರಾಹು. ರಾಹು ದಿಕ್ಕಿಗೆ ಬೆನ್ನು ಮಾಡಿ ರಂಗಸ್ಥಳ ನಿರ್ಮಿಸಬೇಕು ಎಂಬುದು ನಿಯಮ. ಚೌಕಿಯಲ್ಲಿ ಗಣಪತಿ ಇಡುವುದಕ್ಕೂ ಈ ನಿಯಮ ಅನ್ವಯ. ದೇವಸ್ಥಾನಕ್ಕೆ ಬೆನ್ನು ಹಾಕಿ, ರಂಗಸ್ಥಳ ಕಟ್ಟಬಾರದು. ಆಗ ಆ ದಿನ ರಾಹುಮುಖವಾದರೆ?? ಇದಕ್ಕೊಂದು ಪರಿಮಾರ್ಜನೆ ಇದೆ. ಚೌಕಿ, ರಂಗಸ್ಥಳಕ್ಕೆ ತೆಂಗಿನಕಾಯಿ ಸುತ್ತುಬರಿಸಿ ಮೂರು ದಾರಿ ಸೇರುದಲ್ಲಿ ಅದನ್ನು ಒಡೆಯುವುದು. ರಂಗದ ಎದುರು ಬಲಭಾಗ ರಾಹು ದಿಕ್ಕು ಸಿಗದಿದ್ದರೆ ಒಳ್ಳೆಯದು.

ರಂಗದಲ್ಲಿ ರಕ್ತ ತೋರಿಸಬಾರದು. ಬಿಳಿ ಬಟ್ಟೆ ಹೊದಿಸಿದ, ಹೆಣ ಹೊರುವ ದೃಶ್ಯ ತೋರಿಸಬಾರದು, ಹೀಗೆಲ್ಲ ನಿಯಮವಿದೆ. ಯಕ್ಷಗಾನ ಬಯಲಾಟ ಎಂದ ಮೇಲೆ ಇದು ದೃಶ್ಯ ಮಾಧ್ಯಮವಾದುದರಿಂದ ನಿಬಂಧನೆಯನ್ನು ಸ್ವಲ್ಪ ಸಡಿಲಿಸಬಹುದು ಎನಿಸುತ್ತಿದೆ.

ಕೆಲವು ರೂಢಿಸಿಕೊಂಡು ಬಂದ ನಿಯಮಗಳಲ್ಲಿ ಚೌಕಿ ಪೂಜೆ ಅದೇ ರೀತಿ ರಂಗಸ್ಥಳದಲ್ಲಿ ಹಿಮ್ಮೇಳದವರಾದ ಭಾಗವತರು, ಮದ್ದಳೆಗಾರ, ಶ್ರುತಿ ನುಡಿಸುವಾತ, ಚೆಂಡೆಗಾರ ಮತ್ತು ಚಕ್ರತಾಳದಾತ ಅವರಲ್ಲರಿಗೂ ನಿಲ್ಲುವ ಅಥವಾ ಕುಳಿತುಕೊಳ್ಳುವುದಕ್ಕೆ ನಿರ್ದಿಷ್ಟ ಸ್ಥಳ ಮತ್ತು ಭಾಗಗಳಿವೆ ಹಾಗೆಯೇ ವೇಷಧಾರಿ ಪ್ರವೇಶಿಸುವುದಕ್ಕೆ ನಿರ್ಗಮಿಸುವುದಕ್ಕೆ ನಿರ್ದಿಷ್ಟ ಭಾಗಗಳಿವೆ. ಯಕ್ಷಗಾನದ ವೇಷಗಳಲ್ಲಿ ವಿಷ್ಣು, ಕೃಷ್ಣ, ದೇವೇಂದ್ರ, ಹಾಗು ರಾಕ್ಷಸ ವೇಷಗಳಿಗೆ ನಿರ್ದಿಷ್ಟವಾದ ಬಣ್ಣದ ಮುಖವರ್ಣಿಕೆ ನಿರ್ದಿಷ್ಟ ಬಣ್ಣದ ವಸ್ತ್ರಾಲಂಕಾರವಿದೆ.

ಪೂರ್ವ ರಂಗವೂ ದೇವತಾ ಸ್ತುತಿಗಳೊಂದಿಗೆ ನಡೆಯುವ ರಂಗ ಪ್ರದರ್ಶನ. ಕಾಲ ಬದಲಾವಣೆಯೊಂದಿಗೆ ಕೆಲವು ಬಯಲಾಟ, ಟೆಂಟ್ ಮೇಳಗಳಲ್ಲಿ ಕಣ್ಮರೆಯಾಗಿವೆ.

ವೇಷ ಭೂಷಣ– ಪ್ರತಿಯೊಂದು ಪಾತ್ರಗಳಿಗೂ ಅವುಗಳದ್ದೇ ಆದ ವೇಷಭೂಷಣಗಳ ನಿಯಮ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕಾಲಾನು ಕ್ರಮೇಣ ವೇಷಭೂಷಣಗಳಲ್ಲೂ ಗುರುತರವಾದ ಬದಲಾವಣೆಗಳನ್ನು ಗಮನಿಸುತ್ತಿದ್ದೇವೆ. ಮುಖ್ಯವಾಗಿ ಹಿಮ್ಮೇಳ ಕಲಾವಿದರು ಪಂಚೆಯುಟ್ಟ ಪೇಟ ಕಟ್ಟಿಯೇ ರಂಗಸ್ಥಳದಲ್ಲಿ ಕೂರಬೇಕು ಎಂಬ ನಿಯಮವಿದೆ. ಆದರೆ ಈಗ ಮಹಿಳಾ ಕಲಾವಿದೆಯರೂ ಹಿಮ್ಮೇಳದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದರಿಂದ ಮಹಿಳೆಯರು ಪೇಟ ಕಟ್ಟಿಕೊಳ್ಳುವ ನಿಯಮದಲ್ಲಿ ಸಡಿಲಿಕೆ ಇದೆ.

ಮಹಿಳೆಯರ ಪ್ರವೇಶ– ಯಕ್ಷಗಾನ ಕಲೆ ಎಂಬ ದೃಷ್ಟಿಯಲ್ಲಿ ಮೇಳದಲ್ಲಿ ಕಲಾವಿದೆಯರ ಪ್ರದರ್ಶನಕ್ಕೆ ಅವಕಾಶವಿದೆ. ದೇವತಾರಾಧನೆಯ ಹಿನ್ನಲೆಯಲ್ಲಿ ಪ್ರದರ್ಶಿಸುವ ಯಕ್ಷಗಾನದಲ್ಲಿ ಕಲಾವಿದೆಯರಿಗೆ ಅವಕಾಶ ಕಡಿಮೆ.



## ನಿಬಂಧನೆ, ಚೌಕಟ್ಟು

ಯಕ್ಷಗಾನದ ಮುಮ್ಮೇಳ, ಹಿಮ್ಮೇಳ, ಪ್ರಸಂಗಗಳಿಗೆ ಸಂಬಂಧ ಪಟ್ಟಂತೆ ಕೆಲವು ನಿಬಂಧನೆ ಚೌಕಟ್ಟುಗಳನ್ನು ರೂಪಿಸಿಕೊಂಡಿದ್ದರೂ, ಯಕ್ಷಗಾನಕ್ಕೆ ಭರತನಾಟ್ಯ ಕೂಚುಪುಡಿ ಇತ್ಯಾದಿ ಕಲೆಗಳಿಗಿದ್ದಂತೆ "ಇದಮಿತ್ಥಂ" ಎಂಬ ಲಿಖಿತ ಸಿದ್ಧಾಂತವಿಲ್ಲ ಎನ್ನಬಹುದು. ಯಕ್ಷಗಾನ ಜನಪದ ಕಲೆ ಎಂಬ ಕಾರಣಕ್ಕಾಗಿಯೋ ಏನೋ ನಿರ್ದಿಷ್ಟ ಸೂತ್ರ ನಿಯಮಗಳನ್ನು ತರುವಲ್ಲಿ ಅಷ್ಟೊಂದು ಯಶಸ್ಸು ಕಂಡಿಲ್ಲ. ನಿಖರವಾದ ನಿಬಂಧನೆಗಳು ಯಕ್ಷಗಾನಕ್ಕೆ ಇಲ್ಲವಾದ ಕಾರಣವೇ ಕರ್ನಾಟಕದಲ್ಲಿ ಎಲ್ಲರ ಮನ ಗೆಲ್ಲಲಾಗಲಿಲ್ಲ. ಕೇವಲ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗೆ ಸೀಮಿತವಾಯಿತು. ಬಿಜಾಪುರ. ಬಾಗಲಕೋಟೆ. ಬಳ್ಳಾರಿ ಕಡೆ ಯಕ್ಷಗಾನವನ್ನು ಮನಸಾ ಇಂದಿಗೂ ಸ್ವೀಕರಿಸಲಿಲ್ಲ. ಡಾ. ಶಿವರಾಂ ಕಾರಂತರ ವರ್ಚಸ್ಸಿನಿಂದ ಯಕ್ಷಗಾನ ಸೀಮೋಲ್ಲಂಘನ ಮಾಡಿದೆ ಎಂಬುದು ಸತ್ಯವಾದರೂ, ಅಲ್ಲಿ ಇದನ್ನು ನೋಡಿದವರು, ಮೆಚ್ಚಿದವರು ಯಾರು? ಯೋಚಿಸಬೇಕಾದ ವಿಷಯ. ಬಯಲುಸೀಮೆಯ ಮುಗ್ಧರನ್ನು ಆಕರ್ಷಿಸುವಲ್ಲಿ ಯಕ್ಷಗಾನ ಕಲಾವಿದರು, ನಾವು ಸೋತಿದ್ದೇವೆ.

ನಮ್ಮ ಬಾಲ್ಯ ಅಂದರೆ ಅರ್ಧ ಶತಮಾನದ ಹಿಂದೆ ಯಕ್ಷಗಾನ– ಬಯಲಾಟ ಎಂದು ಕರೆಯುತ್ತಿರಲಿಲ್ಲ, ಭಾಗವತರಾಟ ಎಂದೇ ಪ್ರಚಲಿತವಾಗಿತ್ತು, ಆ ಕಾಲದಲ್ಲಿ ಕಲಾವಿದರು ಪುರಾಣದ ಪರಿಪೂರ್ಣ ಜ್ಞಾನವನ್ನು ಹೊಂದಿರಲಿಲ್ಲ. ಭಾಗವತರು ಉಳಿದವರಿಗಿಂತ ಜ್ಞಾನಸಂಪನ್ನರಾಗಿದ್ದರು. ಅವರೇ ನಿರ್ದೇಶಕರೂ ಆಗಿದ್ದರು. ನಂತರ ಪ್ರಗತಿ ಹೊಂದಿದ್ದು ಸತ್ಯ. ವೇಷಭೂಷಣದಲ್ಲಿ, ನೃತ್ಯ ಮತ್ತು ಅಭಿನಯದಲ್ಲಿ, ಮಾತುಗಾರಿಕೆಯಲ್ಲಿ ಪ್ರಗತಿ ಕಂಡಿದೆ. ಇದಕ್ಕೆ ಕಾರಣ ಯೋಚಿಸಿದರೆ ವಿದ್ವಾಂಸರು ಈ ಕಲೆಯನ್ನು ಗೌರವಿಸಿ ಪದಾರ್ಪಣೆ ಮಾಡಿದರು, ಮೌಲ್ಯ ಕಲ್ಪಿಸಿಕೊಟ್ಟರು. ಮುಖ್ಯವಾಗಿ ಸ್ಮರಣೀಯರಾದ ಕೆಲವರ ಹೆಸರನ್ನು ಹೇಳಿದರೆ ತಪ್ಪಾಗದೆಂದು ಭಾವಿಸುತ್ತೇನೆ. (ವಿ.ಸೂ – ತಾಳಮದ್ದಳೆ ಕೂಟವನ್ನು ಬಿಟ್ಟು ಕೇವಲ ಆಟದಲ್ಲಿ ಭಾಗವಹಿಸಿದವರ ಬಗ್ಗೆ ಮಾತ್ರ ತಿಳಿಸಲು ಇಚ್ಛಿಸುತ್ತೇನೆ.) ಪೂಜ್ಯ ದಿ. ಕುರಿಯ ವಿಠಲ ಶಾಸ್ತ್ರಿಗಳು ತೆಂಕು ತಿಟ್ಟಿನ ಯಕ್ಷಗಾನದಲ್ಲಿ ಆವಿಷ್ಕಾರ ಮಾಡಿದವರು. ಇನ್ನು ಸಾಮಗದ್ವಯರು, ಶೇಣಿಯವರು, ತೆಕ್ಕಟೆ, ಕುಂಬ್ಳೆ, ಗೋವಿಂದ ಭಟ್.. ಹೀಗೆ ಬಹಳ ಜನ ತಮ್ಮ ಕೊಡುಗೆ ನೀಡಿ ಯಕ್ಷಗಾನವನ್ನು ಉತ್ತುಂಗಕ್ಕೆ ಕೊಂಡೊಯ್ದರು. ಆದರೂ ಸೀಮಿತ ಪ್ರದೇಶದಲ್ಲೇ ಉಳಿದಿದೆ. 'ಯಕ್ಷಗಾನಂ ವಿಶ್ವಗಾನಂ' ಎಂದು ನಾವು ಹೇಳಿಕೊಳ್ಳಬಹುದಷ್ಟೇ. ಅದ್ಭುತ ಪ್ರತಿಭೆಯ ಕಲಾವಿದರೂ ಸಾಮಾನ್ಯ ಚಿತ್ರರಂಗದ ಕಲಾವಿದನಷ್ಟೂ ಪ್ರಚಾರ ಗಿಟ್ಟಿಸಿಕೊಳ್ಳಲು ಆಗಲಿಲ್ಲ.

ಬಹಳ ಹಿಂದೆಯೇ ಸಭಾ ಲಕ್ಷಣವೆಂಬ ಗ್ರಂಥ ಪ್ರಕಟವಾಗಿದೆ, ಅದರಲ್ಲಿ ಬರುವ ಕೊಕ್ಕೆ ಚಿಕ್ಕನ ಹಾಸ್ಯ, ಮದುವೆ ಪುರೋಹಿತ, ಕೋಡಂಗಿ ಇತ್ಯಾದಿ ಈಗ ರಂಗದಲ್ಲಿ ಬಳಸಿದರೆ ಪ್ರೇಕ್ಷಕರು ಸಹಿಸಲಾರರು, ಕ್ಷಮಿಸಲಾರರು. ಕಲಾವಿದನಾದವ ಪೆಟ್ಟು ತಿನ್ನಬೇಕಾದೀತು. (ವಿವರಣೆಗೆ– ಸಭಾ ಲಕ್ಷಣ ಪುಸ್ತಕ ನೋಡಿ) ರಂಗಸ್ಥಳ ಹೇಗಿರಬೇಕು ಎಂದು ನಿಯಮವಿತ್ತು. ಅರ್ಧಚಂದ್ರಾಕೃತಿಯ ರಂಗಸ್ಥಳ ನಿರ್ಮಿಸುತ್ತಾರೆ. ಎಷ್ಟು ಉದ್ದ ಎಷ್ಟು ಅಗಲ ಎಂದು ಆ ನಿಯಮವನ್ನು ಪಾಲಿಸಿದ್ದು ನನ್ನ ಅನುಭವಕ್ಕೆ ಬರಲಿಲ್ಲ. ನೆಲದಲ್ಲಿ ಕಂಬ ನೆಟ್ಟು ಬಾಳೆಮರ ಕಟ್ಟಿ ಮಾವಿನ ತೋರಣ ಹಾಕಿ ರಂಗಸ್ಥಳ ಮಾಡುತ್ತಿದ್ದರು. ತೆಂಗಿನ ಮಡಲು ಸುತ್ತ ಕಟ್ಟಿ ಚೌಕಿ ಮನೆ ತಯಾರಾಗುತ್ತಿತ್ತು ನಾಲ್ಕು ಗ್ಲಾಸ್ ಲೈಟ್ ರಂಗಸ್ಥಳಕ್ಕೆ. ಚೌಕಿಗೆ ಒಂದು ಅಥವಾ ಎರಡು. ಮೈಕ್ ಇರಲಿಲ್ಲ. ಈಗ ಹೆಲೋಜೆನ್ ಲೈಟ್. ಮೊದಲು ಮೈಕ್ ಭಾಗವತರಿಗೆ ಮತ್ತು ಪಾತ್ರಧಾರಿಗಳಿಗೆ ಇತ್ತು. ಈಗ ಮದ್ದಳೆ, ಚೆಂಡೆಯವರಿಗೂ ಮೈಕ್ ಬೇಕು. ಆಗಿನ ಭಾಗವತರು ನಿಜ ಸ್ವರದಲ್ಲಿ ಹಾಡಿ ಜನರನ್ನು ಮೆಚ್ಚಿಸುತ್ತಿದ್ದರು. ಈಗಿನವರು ಧ್ವನಿವರ್ಧಕಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಯಕ್ಷಗಾನದಲ್ಲಿ ಈ ಹಿಂದೆ ಒಂದು ಅಲಿಖಿತ ನಿಯಮವಿತ್ತು. ಪ್ರಥಮವಾಗಿ ಒಡ್ಡೋಲಗಕ್ಕೆ ಬಂದ ಪಾತ್ರ ಸಾಯಬಾರದು ಎಂದು. ಹಾಗಾಗಿ ಒಂದೋ ಇಂದ್ರನ ಓಲಗ, ಧರ್ಮರಾಯನ ಓಲಗ, ರಾಮನ ಓಲಗ ಹೀಗೆ ಪ್ರಾರಂಭಿಸಿ ಕಥೆಗೆ ಹೊಂದಿಸುತ್ತಿದ್ದರು. ಯಕ್ಷಗಾನ ಉದ್ಯಮವಾಗಿ ಮಾರ್ಪಟ್ಟ ಮೇಲೆ ಹೆಣ್ಣು ನೀರು ತರುವಲ್ಲಿಂದಲೂ,

ರಂಗವಲ್ಲಿ ಬರೆಯುವುದರಿಂದಲೂ, ಬೇಡರ ದೃಶ್ಯದಿಂದಲೂ ಕಥೆ ಪ್ರಾರಂಭವಾಗುತ್ತದೆ. ಹಾಗಾದರೆ ಎಲ್ಲಿದೆ ಯಕ್ಷಗಾನಕ್ಕೆ ಸಂಪ್ರದಾಯ? ಯಾರಾದರೂ ಪ್ರೇಕ್ಷಕ ಪ್ರಜ್ಞಾವಂತರು ಇದನ್ನೆಲ್ಲಾ ಆಕ್ಷೇಪಿಸಿದ್ದಾರೆಯೇ?

ಬಹಳ ಹಿಂದೆ ಹಾಸ್ಯದಲ್ಲಿ ಅಶ್ಲೀಲ ಬಳಕೆ ಇತ್ತು. ಹಾಲಾಡಿ ಕೊರಗು, ಕುಂಜಾಲು ರಾಮಕೃಷ್ಣ, ತೆಂಕಿನಲ್ಲಿ ಪೆರುಗೋಡಿ ನಾರಾಯಣ ಭಟ್ಟ, ವಿಟ್ಲ ಗೋಪಾಲಕೃಷ್ಣ ಜೋಶಿ ಇವರೆಲ್ಲ ಸಭ್ಯತೆಯ ಎಲ್ಲೆ ಮೀರದೆ ಜನರನ್ನು ಮೀರದೆ ರಂಜಿಸಿದರು. ಈಗಿನ ಹಾಸ್ಯ ಹೇಳುವುದೇ ಬೇಡ, ಹಾಸ್ಯಗಾರನೋ, ಸರ್ಕಸ್ ನವನೋ, ಎಂಬ ಸಂಶಯ ಹುಟ್ಟುವಂತಾಗಿದೆ.

ಸಂಪ್ರದಾಯವೆಂದರೆ ಹಿಂದೆ ಚಾಲು ಕುಣಿತವಿರಲಿಲ್ಲ. ಒಂದೇ ಚರಣವನ್ನು ಭಾಗವತರು 10 ಬಾರಿ ಹೇಳುತ್ತಿರಲಿಲ್ಲ. ಈ ಕ್ರಮ ಶೇಷಗಿರಿ ಭಾಗವತರು, ಗೋರ್ಪಾಡಿ ವಿಠಲ ಪಾಟೀಲ್, ಜಾನುವಾರು ಕಟ್ಟೆ, ಗೋಪಾಲ ಕಮ್ತಿ, ನಾರ್ಣಪ್ಪ ಉಪ್ಪೂರರವರೆಗೆ ಇತ್ತು. ಯಕ್ಷಗಾನದ ಧ್ರುವತಾರೆ ಕಾಳಿಂಗ ನಾವುಡರು ಚಾಲುಕುಣಿತ ಪ್ರಾರಂಭಿಸಿದರು. ಸುಬ್ರಹ್ಮಣ್ಯ ಧಾರೇಶ್ವರ ಭಾಗವತರು ಕೂಡ ಅದನ್ನು ಮುಂದುವರೆಸಿದರು. ತೆಂಕಿನಲ್ಲಿ ಕಡತೋಕ ಮಂಜುನಾಥ ಭಾಗವತರು ಚಾಲು ಕುಣಿತ ಆರಂಭಿಸಿದರು. ಬಲಿಪರು, ಅಗರಿಯವರು, ಮಂಡೆಚ್ಚರ ಕಾಲದಲ್ಲಿ ಮಿತಿಮೀರವಿಲ್ಲ. ಅಮ್ಮಣ್ಣಾಯರು, ಪದ್ಯಾಣರು, ಹೊಳ್ಳರು ಚಾಲುಕುಣಿತವನ್ನು ಹಿತಮಿತವಾಗಿ ಬಳಸುತ್ತಿದ್ದರು. ಯಕ್ಷಗಾನದಲ್ಲಿ ಆವಿಷ್ಕಾರವೂ ಆಗಿದೆ, ಅಪಸವ್ಯವೂ ಬೆಳೆಯುತ್ತಿದೆ. ಪುರಾಣ ಪ್ರಸಂಗಗಳಲ್ಲಿ ಸ್ತ್ರೀ ಪಾತ್ರಧಾರಿಗಳು ಹೆಚ್ಚಾಗಿ ಭರತನಾಟ್ಯದ ಕಚ್ಚೆ ಬಳಸುತ್ತಿರುವುದು ವಿಷಾದದ ವಿಷಯ. ಹಿಂದೆ ಹಿಮ್ಮೇಳದವರು ಕಲಾವಿದರೊಂದಿಗೆ ಸ್ಪಂದಿಸುತ್ತಿದ್ದರು. ಈಗ ಪದ್ಯ ಮುಗಿದಲ್ಲಿಗೆ ತಮ್ಮ ಹೊಣೆಗಾರಿಕೆ ಮುಗಿಯುತ್ತೆ, ಮತ್ತೆ ಪುನಹ ಪದ್ಯಕ್ಕೆ ಸಿದ್ಧರಾದರೆ ಸರಿ ಎಂದು ಭಾವಿಸುವವರಿದ್ದಾರೆ.

ಇಂತಹ ಅಪಸವ್ಯಗಳನ್ನು ತಡೆಯುವುದಕ್ಕಾಗಿಯೇ ಸ್ಪಷ್ಟ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾದ ಅಗತ್ಯವಿದೆ. ಇಂತಹಾ ಅನೇಕ ವಿಚಾರಗಳಲ್ಲಿ ಸುದಾರಣೆಯಾದರೆ ಯಕ್ಷಗಾನಕ್ಕೆ ಶಾಸ್ತ್ರೀ ಸ್ಥಾನಮಾನ ಸಿಗುವ ದಿನಗಳು ದೂರವಿಲ್ಲ. ಇನ್ನು ಕೆಲವೊಂದು ಅಲಿಖಿತ ಸಂಪ್ರದಾಯ ಪರಂಪರೆಗಳನ್ನು ಶ್ರದ್ಧಾಳುಗಳಾಗಿ ದೇವರು ಮತ್ತು ಹಿರಿಯರನ್ನು ನಂಬುವವರಿಗಾಗಿ ಪಾಲಿಸಿದರೆ ಎಲ್ಲರಿಗೂ ಶುಭ ಶೋಭೆ. ಕೆಲವು ಸಂಪ್ರದಾಯಗಳು ಯಕ್ಷಗಾನದ ಸೌಂದರ್ಯವನ್ನು ಹೆಚ್ಚಿಸುವಂಥದ್ದು. ಅಂಥದ್ದನ್ನು ಉಳಿಸಿಕೊಳ್ಳಬೇಕು. ಅಗತ್ಯವಿಲ್ಲದ ಪೊಳ್ಳು ಪರಿಪಾಠಗಳನ್ನು ಗಾಳಿಗೆ ತೂರಬೇಕು..

***ಲೇಖಕರು– ಎಂ. ಕೆ. ರಮೇಶ್ ಆಚಾರ್, ಹಿರಿಯ ಯಕ್ಷಗಾನ ಕಲಾವಿದರು***

---

# ಮೇಳ ದರ್ಪಣ–01

## <u>ಲಾಟ್ರಿ ಹೊಡೀತು, ಮೇಳ ಎದ್ದಿತು</u>– ಶ್ರೀ ಮಹಾಮ್ಮಾಯೀ ಕೃಪಾಪೋಷಿತ ಯಕ್ಷಗಾನ ಮಂಡಳ, ಸುರತ್ಕಲ್ – ಮೇಳ ಹುಟ್ಟಿದ ರೋಚಕ ಕಥೆ




ಸುರತ್ಕಲ್ ನ ವ್ಯಾಪಾರೀ ಮನೆತನದ, ಯಕ್ಷಗಾನದ ಪ್ರೇಮಿಗಳಾದ ಕಸ್ತೂರಿ ವೆಂಕಟರಮಣ ಪೈಗಳು, ಸುರತ್ಕಲ್ ನ ತಮ್ಮ ಮನೆತನದ ಶ್ರೀ ಮಹಾಮ್ಮಾಯೀ ದೇವಸ್ಥಾನದಲ್ಲಿ ಪ್ರತಿ ನವರಾತ್ರಿ ಸಂದರ್ಭದಲ್ಲಿ ಯಕ್ಷಗಾನ ಪ್ರದರ್ಶನ ಏರ್ಪಡಿಸುತ್ತಿದ್ದರು. ಅವರ ಸುಪುತ್ರರಾದ ಕಸ್ತೂರಿ ವಾಸುದೇವ ಪೈ, ಕಸ್ತೂರಿ ವರದರಾಯ ಪೈ ಸೋದರರಿಗೆ ಯಕ್ಷಗಾನ ಮೇಳ ಹೊರಡಿಸಬೇಕೆಂಬ ಹಂಬಲವಿತ್ತು. 1956 ರಲ್ಲಿ ಪೈ ಸೋದರರಿಗೆ ಅಂದಿನ ಮೈಸೂರು ರಾಜ್ಯ ಲಾಟರಿಯಲ್ಲಿ 25,000.00ರೂ ಬಹುಮಾನ ದೊರಕಿತು. ಈ 25000.00 ಎಂಬುದು ಈಗಿನ ಲೆಕ್ಕಾಚಾರದಲ್ಲಿ ಸಣ್ಣ ಮೊತ್ತ ಇರಬಹುದು. ಆದರೆ, ಇದು ಸುಮಾರು 60 ವರ್ಷಗಳ ಹಿಂದಿನ ಘಟನೆಯಾದ ಕಾರಣ, ಈಗಿನ ಲೆಕ್ಕಾಚಾರದಲ್ಲಿ ಈ ಮೊತ್ತ ರೂಪಾಯಿ 25 ಲಕ್ಷ ದಾಟಬಹುದೇನೋ? ಈ ಮೂಲಧನದೊಂದಿಗೆ ಪೈ ಸೋದರರು 1957 ರಲ್ಲಿ ಶ್ರೀ ಮಹಮ್ಮಾಯೀ ಕೃಪಾಪೋಷಿತ ಯಕ್ಷಗಾನ ಮೇಳ ಸುರತ್ಕಲ್ ಎಂಬ ಹೆಸರಿನಲ್ಲಿ ಮೇಳ ಆರಂಭಿಸಿದರು. ಅಂದಿನ ಕಾಲದ ಸುಪ್ರಸಿದ್ಧ ಭಾಗವತರು, ಪೈ ಸೋದರರ ನಿಕಟ ಮಿತ್ರರಾದ ಅಗರಿ ಶ್ರೀನಿವಾಸ ಭಾಗವತರು ಸುರತ್ಕಲ್ ಮೇಳಕ್ಕೆ ಪ್ರಧಾನ ಭಾಗವತರಾಗಿ ಬಂದು ಪೈ ಸೋದರರನ್ನು ಪ್ರೋತ್ಸಾಹಿಸಿದರು.

ಪ್ರಾರಂಭದ ತಿರುಗಾಟದಲ್ಲಿ (1957) ಅಗರಿಯವರೊಂದಿಗೆ ಖ್ಯಾತ ಮದ್ದಲೆ ವಾದಕರಾದ ಕುದ್ರೆಕೋಡ್ಲು ರಾಮ ಭಟ್, ಸುಪ್ರಸಿದ್ಧ ಕಲಾವಿದರಾದ ಶೇಣಿ ಗೋಪಾಲಕೃಷ್ಣ ಭಟ್, ವೇಣೂರು ವೆಂಕಟರಮಣ ಭಟ್, ಕೊಳ್ಯೂರು ರಾಮಚಂದ್ರ ರಾವ್, ವಿಟ್ಲ ಜೋಷಿ ಮುಂತಾದ ಸುಪ್ರಸಿದ್ಧ ಕಲಾವಿದರ ಗಡಣವೇ ಇತ್ತು . ಆ ತಿರುಗಾಟದ ಪ್ರದಾನ ಪ್ರಸಂಗ ಅಗರಿ ಶ್ರೀನಿವಾಸ ಭಾಗವತರೇ ರಚಿಸಿದ "ತಿರುಪತಿ ಕ್ಷೇತ್ರ ಮಹಾತ್ಮೆ". ಈ ಪ್ರಸಂಗದಲ್ಲಿ, ಶೇಣಿಯವರು ಮಾಧವ ಭಟ್ಟ ಪಾತ್ರದಲ್ಲಿ ತುಂಬಾ ಪ್ರಸಿದ್ಧಿ ಗಳಿಸಿದರು. ಎರಡನೇ ಪ್ರಸಂಗ "ಚಂದ್ರಾವಳಿ ವಿಲಾಸ". ಶೇಣಿಯವರ ಚಂದಗೋಪ, ವಿಟ್ಲ ಜೋಷಿಯವರ ಚಂದಗೋಪನ ತಾಯಿಯ ಪಾತ್ರ ಅತ್ಯಂತ ಪ್ರಸಿದ್ಧಿ ಹೊಂದಿತು. ಶೇಣಿಯವರು, ಹೆಡ್ಡ ಚಂದಗೋಪನಾಗಿ "ಹೆಡ್ಡನಾದರೂ, ಬುದ್ದಿವಂತನಂತೆ ಇರಬೇಕು" ಎಂದು ಹೇಳಿ, ಚಂದಗೋಪನ ಪಾತ್ರ ಚಿತ್ರಿಸಿದ್ದನ್ನು ಮರೆಯುವಂತೆಯೇ ಇಲ್ಲ. ಅದರೊಂದಿಗೆ ಎಲ್ಲಾ ಪೌರಾಣಿಕ ಪ್ರಸಂಗವನ್ನೂ ಪ್ರದರ್ಶಿಸುತ್ತಿದ್ದರು. ನಂತರದ ವರ್ಷದ ತಿರುಗಾಟದಲ್ಲಿ, 1958 ರಲ್ಲಿ ಶೇಣಿಯವರು ಇರಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಸಂವಹನದ ಕೊರತೆಯೇ ಆಗಿತ್ತು. ಶೇಣಿಯವರು ಆದಾಗಲೇ ಕೂಡ್ಲು ಮೇಳ ಸೇರಿಯಾಗಿತ್ತು. ಆದ ಕಾರಣದಿಂದಾಗಿ ಮುಂದಿನ ವರ್ಷದ ತಿರುಗಾಟದಲ್ಲಿ, ಸುಪ್ರಸಿದ್ಧ ಕಲಾವಿದರಾದ ಮಲ್ಪೆ ಶಂಕರನಾರಾಯಣ ಸಾಮಗ, ಕುಂಬ್ಳೆ ಸುಂದರ ರಾವ್, ಪುತ್ತೂರು ನಾರಾಯಣ ಹೆಗ್ಡೆ, ಕಡಬ ಸಾಂತಪ್ಪ, ಏಕ್ಟರ್ ಜೋಷಿ ಮುಂತಾದವರಿದ್ದರು. ಈ ವರ್ಷದ ತಿರುಗಾಟದಲ್ಲಿ "ಚಂದ್ರಾವಳಿ ವಿಲಾಸ"

ಪ್ರಸಂಗವೇ ಮುಂಚೂಣಿಯಲ್ಲಿತ್ತು. ಆಗ ಮಲ್ಪೆ ಶಂಕರನಾರಾಯಣ ಸಾಮಗರು ಚಂದಗೋಪನ ಪಾತ್ರ ನಿರ್ವಹಿಸುತ್ತಿದ್ದರು. ಸಾಮಗರ ಚಂದಗೋಪನ ಪಾತ್ರವೂ ಹೊಸದಾದ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿತ್ತು. ಈ ಸಮಯದಲ್ಲಿ, "ಶುಕ್ರ ಪ್ರತಾಪ-ಬುಧೋತ್ಪತ್ತಿ" ಪ್ರಸಂಗ ಪ್ರದರ್ಶಿಸಿದ್ದರು. ಈ ಪ್ರಸಂಗದಲ್ಲಿ ಸಾಮಗರ ಶುಕ್ರಾಚಾರ್ಯ, ಕುಂಬ್ಳೆಯವರ ಚಂದ್ರನ ಪಾತ್ರ ಅಭೂತಪೂರ್ವ ಯಶಸ್ಸು ಗಳಿಸಿತ್ತು. ಇದರೊಂದಿಗೆ **"ವಾಲಿ ಮೋಕ್ಷ"**, ರಾವಣ ವಧೆ, ಭೀಷ್ಮ ವಿಜಯ ಮುಂತಾದ ಪೌರಾಣಿಕ ಪ್ರಸಂಗಗಳೂ ಹೆಚ್ಚಿನ ಪ್ರಮಾಣದಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ನಂತರದ ವರ್ಷದ ತಿರುಗಾಟದಲ್ಲಿ, ಬೇರೆ ಮೇಳಗಳು ತುಳು ಪಾಡ್ದನ ಆಧರಿತ "ತುಳುನಾಡ ಸಿರಿ" ಪ್ರಸಂಗ ಪ್ರದರ್ಶಿಸಿ ಜನಪ್ರಿಯತೆ ಗಳಿಸಿತು. ಆಗ ಅಗರಿ ಶ್ರೀನಿವಾಸ ಭಾಗವತರೂ ಈ ಪ್ರಸಂಗ ರಚಿಸಿ, ಸುರತ್ಕಲ್ ಮೇಳವೂ ತುಳು ಪ್ರಸಂಗ ಪ್ರದರ್ಶಿಸಿತ್ತು. ಆದರೆ, ಅಗರಿ ಶ್ರೀನಿವಾಸ ಭಾಗವತರು ತುಳು ಪ್ರಸಂಗದಲ್ಲಿ ಭಾಗವತಿಕೆ ಮಾಡಲಾರೆ ಎಂಬ ಕಟ್ಟಿಗೆ ಬಿದ್ದಾಗ, ಅವರ ಸುಪುತ್ರರಾದ ಅಗರಿ ರಘುರಾಮ ಭಾಗವತರು ಸುರತ್ಕಲ್ ಮೇಳಕ್ಕೆ ಸೇರ್ಪಡೆಯಾದರು. ಅಗರಿ ಶ್ರೀನಿವಾಸ ಭಾಗವತರು ಪೌರಾಣಿಕ ಪ್ರಸಂಗಗಳಿಗೆ ಮಾತ್ರ ಭಾಗವತಿಕೆ ಮಾಡುತ್ತಿದ್ದರು.




ನಂತರದಲ್ಲಿ ಪ್ರಕಾಂಡ ವಿದ್ವಾಂಸರಾದ ತೆಕ್ಕಟ್ಟೆ ಆನಂದ ಮಾಸ್ತರ್ ರವರು ಸುರತ್ಕಲ್ ಮೇಳಕ್ಕೆ ಸೇರ್ಪಡೆಗೊಂಡರು. ತೆಕ್ಕಟ್ಟೆಯವರ ಪಾಂಡಿತ್ಯ ಈ ಕಾಲದಲ್ಲಿ ವಿಜೃಂಭಿಸಿತು. ಶೇಣಿ ಸುಬ್ರಹ್ಮಣ್ಯ ಭಟ್ ಮದ್ದಲೆ) ಕೆ.ಗೋವಿಂದ ಭಟ್, ಶಿವರಾಮ ಜೋಗಿ, ಬಾಬು ಕುಡ್ತಡ್ಕ, ಮದವೂರು ಗಣಪತಿ ರಾವ್, ಎಂ.ಜನಾರ್ದನ ಜೋಗಿ, ಜನಾರ್ದನ ಆಚಾರ್ಯ, ಪ್ರಕಾಶಚಂದ್ರ ಬಾಯಾರು, ಶಾಮ ಸುಂದರ ಮುಂತಾದ ಕಲಾವಿದರು ಸುರತ್ಕಲ್ ಮೇಳ ಸೇರಿದರು. ಈ ಸಮಯದಲ್ಲಿ ಹೆಚ್ಚಾಗಿ ಪೌರಾಣಿಕ ಪ್ರಸಂಗಗಳೇ ಪ್ರದರ್ಶಿತವಾಗುತ್ತಿತ್ತು.

ಸುಮಾರು, 1965 ರಲ್ಲಿ ಪೈ ಸೋದರರು, ಮಗದೊಮ್ಮೆ ಶೇಣಿಯವರನ್ನು ಸುರತ್ಕಲ್ ಮೇಳಕ್ಕೆ ಆಹ್ವಾನಿಸಿದರು. ಇಲ್ಲಿಂದ ತೊಡಗಿ, ನಂತರದಲ್ಲಿ ಶೇಣಿಯವರು ಯಕ್ಷರಂಗದ ಬಣ್ಣಗಾರಿಕೆಯಿಂದ ನಿವೃತ್ತರಾಗುವ ವರೆಗೂ ಸುರತ್ಕಲ್ ಮೇಳದಲ್ಲೇ ತಿರುಗಾಟ ನಡೆಸಿದರು. (ಸುಮಾರು 1993ರ ತನಕ) 1970ರ ದಶಕ, ಸುರತ್ಕಲ್ ಮೇಳವು ಅತ್ಯಂತ ಔನ್ನತ್ಯ ಸಾಧಿಸಿದ ಕಾಲ . ಆ ನಂತರದಲ್ಲಿ ಸುರತ್ಕಲ್ ಮೇಳ ಹಿಂದೆ ನೋಡಿದ್ದೇ ಇಲ್ಲ ಎನ್ನಬಹುದು. ಇದೇ ಕಾಲದಲ್ಲಿ ಪದ್ಯಾಣ ಗಣಪತಿ ಭಟ್, ಕಡಬ ನಾರಾಯಣ ಆಚಾರ್ಯ, ಶಿರಂಕಲ್ಲು ಸುಬ್ರಹ್ಮಣ್ಯ ಭಟ್, ಮಂಗಳೂರು ನಗರಪಾಲಿಕೆಯ ಪ್ರಥಮ ಮೇಯರ್ ಆಗಿದ್ದ ದೇವಣ್ಣ ಶೆಟ್ಟಿ ಕುಳಾಯಿ, ಕೊಕ್ಕಡ ಈಶ್ವರ ಭಟ್, ದಡ್ಡಿ ನಾರಾಯಣ ಶೆಟ್ಟಿಗಾರ್, ಜನಾರ್ದನ ಗುಡಿಗಾರ, ಪುತ್ತಿಗೆ ಕುಮಾರ ಗೌಡ, ವೇಣೂರು ಸದಾಶಿವ ಕುಲಾಲ್, ಬಣ್ಣದ ಮಾಲಿಂಗ, ಉಜ್ರೆ ರಾಜಾ, ಪುತ್ತೂರು ನಾರಾಯಣ ಭಟ್ ಹಾಸ್ಯಗಾರರು, ಉದ್ಯಾವರ ಬಸವ, ಡಿ. ಮನೋಹರ್ ಕುಮಾರ್ ಮುಂತಾದ ಕಲಾವಿದರು ಸುರತ್ಕಲ್ ಮೇಳ ಸೇರಿದರು. ನಂತರದಲ್ಲಿ ಎಂ.ಕೆ.ರಮೇಶ ಆಚಾರ್ಯರು ಸುರತ್ಕಲ್ ಮೇಳ ಸೇರಿದರು. ಈ ಕಾಲಘಟ್ಟದಲ್ಲಿ ಬಪ್ಪನಾಡು ಕ್ಷೇತ್ರ ಮಹಾತ್ಮೆ, ಸತಿ ಶೀಲವತೀ, ಸಾಧ್ವಿ ಸದಾರಮೆ, ಸ್ವಪ್ನ ವಾಸವದತ್ತ ಮುಂತಾದ ಪ್ರಸಂಗಗಳು ಪ್ರದರ್ಶನಗೊಂಡವು. ಅಭೂತಪೂರ್ವ ಎನಿಸಿದ, ಶೇಣಿಯವರ ಬಪ್ಪಬ್ಯಾರಿಯ ಪಾತ್ರ ನೋಡಲು ಪ್ರೇಕ್ಷಕರ ಜಂಗುಳಿಯೇ ನೆರೆದದ್ದು ಈ ಕಾಲದಲ್ಲೇ. ಸತಿ ಶೀಲವತಿ ಪ್ರಸಂಗದಲ್ಲಿ ಶೀಲವತಿಯಾಗಿ ಕೊಕ್ಕಡ, ವೀರಚಂದ್ರನಾಗಿ ಶಿವರಾಮ ಜೋಗಿ, ಗುರುವಾಗಿ ಶೇಣಿ, ಶೀಲವತಿಯ ಮಾವನ ಪಾತ್ರದಲ್ಲಿ ತೆಕ್ಕಟ್ಟೆಯವರು, ಚಿತ್ರಾಂಗನಾಗಿ ವೇಣೂರು ಸುಂದರ ಆಚಾರ್ಯ, ಗುರುಪುತ್ರಿಯಾಗಿ ಶಾಮಸುಂದರ ಮಿಂಚಿದ್ದರು. ಮುಂದಕ್ಕೆ ಬಡಗು ತಿಟ್ಟಿನ ಸುಪ್ರಸಿದ್ಧ ಕಲಾವಿದರಾದ ಜಲವಳ್ಳಿ ವೆಂಕಟೇಶ್ವರ ರಾವ್ ರವರು ಸುರತ್ಕಲ್ ಮೇಳಕ್ಕೆ ಬಂದರು. ಈ ಕಾಲದಲ್ಲಿ ಸುರತ್ಕಲ್ ಮೇಳದವರಿಂದ ಪ್ರದರ್ಶಿಸಲ್ಪಟ್ಟ "ಶನೀಶ್ವರ ಮಹಾತ್ಮೆ" ಪ್ರಸಂಗವು ಅತ್ಯಂತ ಪ್ರಸಿದ್ಧಿ ಹೊಂದಿತು. ಶೇಣಿಯವರು ರಾಜಾ ವಿಕ್ರಮಾದಿತ್ಯನ ಪಾತ್ರದಲ್ಲಿ, ತೆಕ್ಕಟ್ಟೆಯವರು ನಂದಿ ಶೆಟ್ಟಿ, ಜಲವಳ್ಳಿಯವರು ಶನೀಶ್ವರ, ಕೊಕ್ಕಡದವರ ಆಲೋಲಿಕಾ, ವೇಣೂರು ಸುಂದರ ಆಚಾರ್ಯರ ಯವನ ಕುದುರೆ ವ್ಯಾಪಾರಿ, ಶಿವರಾಮ ಜೋಗಿಯವರು ಈಶ್ವರ ಪಾತ್ರದಲ್ಲಿ ಕಾಣಿಸಿಕೊಂಡು, ಈ ಪ್ರಸಂಗ ಆ ಕಾಲದಲ್ಲಿ ಒಂದು ರೀತಿಯ ಸಂಚಲನ ಮೂಡಿಸಿತ್ತು. ಅಗರಿ ರಘುರಾಮ ಭಾಗವತರು ಹಿಂದಿ ಸಾಹಿತ್ಯದಲ್ಲಿ ಹಾಡುತ್ತಿದ್ದ "ಘೋಡಾ ಸಂದರ್ ಹೈ" ಪದ್ಯವಂತೂ ಪ್ರೇಕ್ಷಕರನ್ನು ಮೋಡಿ ಮಾಡಿತ್ತು. ಪದ್ಯಾಣ-ಕಡಬ- ಶಿರಂಕಲ್ ರವರ ಜೋಡಿಯೂ ಉತ್ತಮವಾಗಿತ್ತು. ನಂತರದಲ್ಲಿ "ಗುಣಸಂದರಿ- ಪಾಪಣ್ಣ ವಿಜಯ" ಪ್ರಸಂಗ ತುಂಬಾ ಜನಪ್ರಿಯತೆ ಗಳಿಸಿತ್ತು. ಶೇಣಿಯವರು ಪ್ರಾರಂಭದಲ್ಲಿ ಚಂದ್ರಸೇನನಾಗಿ, ನಂತರದಲ್ಲಿ, ಕುಬೇರನ ಪಾತ್ರದಲ್ಲಿ, ತೆಕ್ಕಟ್ಟೆಯವರ ಉಗ್ರಸೇನ, ಜೋಗಿಯವರ ಚಂದ್ರಸೇನ, ವೇಣೂರು ಸುಂದರ ಆಚಾರ್ಯರ ಪಾಪಣ್ಣ, ಕೊಕ್ಕಡದವರ ಗುಣಸುಂದರಿ, ರಮೇಶ ಆಚಾರ್ಯರ ಹೇಮಸುಂದರಿ, ಉಜ್ರೆ ರಾಜರ ಯಕ್ಷಿಣಿ ಮುಂತಾದ ಪಾತ್ರಗಳ ನಿರ್ವಹಣೆ ಅತ್ಯಂತ ಜನಮೆಚ್ಚುಗೆ ಗಳಿಸಿತ್ತು. ಈ ಕಾಲಘಟ್ಟದಲ್ಲಿ, ಸುರತ್ಕಲ್ ಮೇಳದವರು ಕನ್ನಡನಾಡಿನ ಹಾಗೂ ತುಳುನಾಡಿನ ಸಂಸ್ಕೃತಿ ಬಿಂಬಿಸುವ ಕೋಟಿಚೆನ್ನಯ, ಕಾಂತಬಾರೆ-ಬೂದಬಾರೆ, ತುಳುನಾಡ ಸಿರಿ, ಕೋರ್ದಬ್ಬು ಬಾರಗ, ದೇವುಪೂಂಜ ಪ್ರತಾಪ ಮುಂತಾದ ಪ್ರಸಂಗಗಳಲ್ಲದೇ, "ಕಡುಗಲಿ ಕುಮಾರ ರಾಮ", "ನಾಟ್ಯ ರಾಣಿ ಶಾಂತಲಾ", "ಸಾಧ್ವಿ ಸದಾರಮೆ", "ಅಮರ ಶಿಲ್ಪಿ ವೀರ ಶಂಭು ಕಲ್ಕುಡ" ಮುಂತಾದ ಪ್ರಸಂಗಗಳನ್ನು ಯಕ್ಷರಂಗಕ್ಕೆ ತಂದರು. ಭಾಗವತಿಕೆಯಲ್ಲಿ ಅಗರಿ ರಘುರಾಮ ಭಾಗವತರು, ಪದ್ಯಾಣ ಗಣಪತಿ ಭಟ್ ಇದ್ದ ಕಾಲವದು. "ಕಡುಗಲಿ ಕುಮಾರ ರಾಮ" ಪ್ರಸಂಗದಲ್ಲಿ, ಕನ್ನಡ ನಾಡಿನ ವೀರ ಕುವರ ಕುಮಾರ ರಾಮನ ಪಾತ್ರದಲ್ಲಿ ಶಿವರಾಮ ಜೋಗಿ, ತುಘಲಕ್ ನಾಗಿ ಶೇಣಿ, ಕಂಪಿಲರಾಯನಾಗಿ ತೆಕ್ಕಟ್ಟೆ, ರತ್ನಾಜಿಯಾಗಿ ಕೊಕ್ಕಡ ಮುಂತಾದವರ ನಿರ್ವಹಣೆ ಅಪಾರ ಮೆಚ್ಚುಗೆ ಗಳಿಸಿತು.

ಡಾ.ಅನಂತ ಪೈಯವರು ರಚಿಸಿದ "ನಾಟ್ಯ ರಾಣಿ ಶಾಂತಲಾ" ಪ್ರಸಂಗವು ಇದೇ ಕಾಲದಲ್ಲಿ ಪ್ರದರ್ಶನಗೊಂಡಿತು. ಶೇಣಿಯವರು, ಬಿಟ್ಟಿದೇವ(ವಿಷ್ಣುವರ್ಧನ), ಕೊಕ್ಕಡದವರು ಹಾಗೂ ರಮೇಶ ಆಚಾರ್ಯರು ಶಾಂತಲಾ, ತೆಕ್ಕಟ್ಟೆಯವರು ಗಂಗರಸ ಪಾತ್ರದಲ್ಲಿ ಪ್ರಸಿದ್ಧಿ ಗಳಿಸಿದರು. "ಸ್ವಪ್ನ ವಾಸವದತ್ತ" ಪ್ರಸಂಗವು ಇದೇ ಕಾಲದಲ್ಲಿ ಪ್ರದರ್ಶನಗೊಂಡು, ಶೇಣಿಯವರು ಉದಯನನ ಪಾತ್ರದಲ್ಲಿ ಕಾಣಿಸಿಕೊಂಡರು. ನಂತರದ ತಿರುಗಾಟದಲ್ಲಿ "ರಾಜಾ ಯಯಾತಿ" ಪ್ರಸಂಗವು ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಶಿವರಾಮ ಜೋಗಿಯವರ ಪೂರ್ವಾರ್ಧದ, ಶೇಣಿಯವರ ಉತ್ತರಾರ್ಧದ ಯಯಾತಿ ತುಂಬಾ ಜನಪ್ರಿಯತೆ ಗಳಿಸಿತು. ಶೇಣಿಯವರು ಯಯಾತಿಯ ಪಾತ್ರವನ್ನು ಸೃಷ್ಟಿಸಿದ ಪರಿಯಂತೂ ಅಸದ್ರಶ, ಅನನ್ಯ. ರಾತ್ರಿ ಮೂರು ಘಂಟೆಯ ನಂತರ , ಕೇವಲ ಮೂರ್ನಾಲ್ಕು ಪಾತ್ರಗಳು ಮಾತ್ರ ಕಾಣಿಸಿಕೊಳ್ಳುವ ಈ ಪ್ರಸಂಗದಲ್ಲಿ, ಶೇಣಿಯವರ ಯಯಾತಿ, ತೆಕ್ಕಟ್ಟೆಯವರ ಶುಕ್ರಾಚಾರ್ಯ, ರಮೇಶಾಚಾರ್ಯರ ದೇವಯಾನಿ, ಉಜ್ರೆ ರಾಜರ ಶರ್ಮಿಷ್ಠೆಯ ಪಾತ್ರ, ಶಾಮಸುಂದರರ ದೇವಯಾನಿಯ ದಾಸಿಯ ಪಾತ್ರವಂತೂ ಅದ್ಭುತ. ಶೇಣಿಯವರು, ದೇವಯಾನಿಯ ದಾಸಿ ಪಾತ್ರದ ಶಾಮಸುಂದರರೊಂದಿಗೆ ಸಂಭಾಷಿಸುವ ಸುಮಾರು ಅರ್ಧ ತಾಸಿನಷ್ಟಿನ ಸಂಭಾಷಣೆ ಇವತ್ತಿಗೂ ಚಿರಸ್ಮರಣೀಯ. ರಾತ್ರಿ ಮೂರು ಗಂಟೆಯಿಂದ ಬೆಳಗ್ಗಿನ ಆರರ ತನಕ, ಕೇವಲ, ಐದಾರು ಪಾತ್ರಗಳು ಮಾತ್ರ ಇರುವ ಈ ಪ್ರಸಂಗದಲ್ಲಿ ಶೇಣಿಯವರ ನಿರ್ವಹಣೆ ಶೇಣಿಯವರ ಅದ್ಭುತ ವಾಗ್ವಿಲಾಸಕ್ಕೆ ಒಂದು ಅತ್ಯುತ್ತಮ ಉದಾಹರಣೆ ಎನಿಸಿತು. ಬಡಗು ತಿಟ್ಟಿನ ಸುಪ್ರಸಿದ್ಧ ಕಲಾವಿದರಾದ ಬೇಗಾರು ಪದ್ಮನಾಭರು ಈ ಕಾಲದಲ್ಲಿ ಸುರತ್ಕಲ್ ಮೇಳದಲ್ಲಿ ತಿರುಗಾಟ ಮಾಡಿದ್ದರು. ಶ್ರೀವಿಷ್ಣು ಅಷ್ಟಾಕ್ಷರಿ ಮಹಾತ್ಮೆ, ಸಮಗ್ರ ವಾಲಿ, ಪ್ರಭಾವತಿ ಕಲ್ಯಾಣ, ರಾಜಾ ದಶರಥ, ಮಹಾ ಭಕ್ತ ಬಾಣಾಸುರ, ವೀರ ರಮಣಿ ಅಭಯರಾಣಿ, ಅತಿಕಾಯ–ಇಂದ್ರಜಿತು, ಬಂಗವಾಡಿದ ಕೊಲ್ಲಿ ದುರ್ಗೆ, ಮುಂತಾದವು ಪ್ರದರ್ಶಿತಗೊಂಡಿತ್ತು. ಒಂದು ವರ್ಷದ ತಿರುಗಾಟದಲ್ಲಿ "ಶ್ರೀಕೃಷ್ಣ ಪರಂಧಾಮ–ಪಾಂಡವ ಸ್ವರ್ಗಾರೋಹಣ" ಪ್ರಸಂಗವು ಮುಖ್ಯ ಪ್ರಸಂಗವಾಗಿ ಪ್ರದರ್ಶನಗೊಂಡಿತ್ತು. ಈ ಪ್ರಸಂಗದಲ್ಲಿ ತೆಕ್ಕಟ್ಟೆಯವರ ಧರ್ಮರಾಜನ ಪಾತ್ರ ಅವಿಸ್ಮರಣೀಯ." ಮಂತ್ರಾಲಯ ಕ್ಷೇತ್ರ ಮಹಾತ್ಮೆ" ಪ್ರಸಂಗದಲ್ಲಿ ಶೇಣಿಯವರ ರಾಘವೇಂದ್ರ ಸ್ವಾಮಿ, ತೆಕ್ಕಟ್ಟೆಯವರ ದಿವಾನರ ಪಾತ್ರ, ಜೋಗಿಯವರ ವೆಂಕಣ್ಣನ ಪಾತ್ರ ಮೆಚ್ಚುಗೆ ಗಳಿಸಿತ್ತು.

ಮುಂದಕ್ಕೆ, ಸುಮಾರು 1985 ರ ನಂತರ ಯಕ್ಷಗಾನದಲ್ಲಿ ತುಳು ಪ್ರಸಂಗಗಳ ಭರಾಟೆ ಬರಲಾರಂಭಿಸಿತು. ಹೊಸ ಹೊಸ ಮೇಳಗಳು ತುಳು ಪ್ರಸಂಗ ಪ್ರದರ್ಶಿಸಲಿಕ್ಕಾಗಿ ಹುಟ್ಟಿಕೊಂಡದ್ದು ಈ ಕಾಲದಲ್ಲೇ. ಸುರತ್ಕಲ್ ಮೇಳವೂ, ಈ ಸ್ಪರ್ಧೆ ಎದುರಿಸಲು ಸಿದ್ಧವಾದಾಗ, ಶೀಂತ್ರಿದ ಚೆನ್ನಕ್ಕೆ, ಸರ್ಪಸಂಕಲೆ, ಸಿರಿಸೀಮೆದ ಕರಿಬಂಟೆ, ಅಂಗಾರಾಣಿ ಗಂಗಾದೇಯಿ, ಕಲ್ಜಿಗದ ಪೊಣ್ಣು, ಸತ್ಯದ ಪೊಣ್ಣು ಸತ್ಯವತಿ, ಬಾಲೆದ ಓಲೆ, ಬಲ್ಮೆದ ಭಟ್ರು, ಸೊನ್ನೆ ಸೈರಗೆ, ಬಂಗಾರ್ ಬಾಲೆ–ಬೊಳ್ಳಿ ಕುಮಾರೆ, ಬಂಗಾರ್ದ ಕೇದಗೆ, ಸ್ವಾಮಿಭಕ್ತೆ ಕಾಜವೆ, ಮುಂತಾದ ಕಾಲ್ಪನಿಕ ಪ್ರಸಂಗಗಳು ಪ್ರದರ್ಶನಗೊಂಡವು. ಇದೇ ಅವಧಿಯಲ್ಲಿ ಮಲ್ಪೆ ವಾಸುದೇವ ಸಾಮಗರು ಸುರತ್ಕಲ್ ಮೇಳ ಸೇರಿ, ಮೂರು ವರ್ಷಗಳ ತಿರುಗಾಟ ನಡೆಸಿದರು. ಮಲ್ಪೆ ರಾಮದಾಸ ಸಾಮಗರೂ ಒಂದು ಅವಧಿಯಲ್ಲಿ, ಶೇಣಿಯವರೊಂದಿಗೆ, ಸುರತ್ಕಲ್ ಮೇಳದಲ್ಲಿ ತಿರುಗಾಟ ಮಾಡಿದ್ದರು. 1993ರಲ್ಲಿ ಶೇಣಿಯವರು ಯಕ್ಷರಂಗದ ಬಣ್ಣಗಾರಿಕೆಯಿಂದ ನಿವೃತ್ತರಾದರು. ತೆಕ್ಕಟ್ಟೆಯವರೂ, ಕೊಕ್ಕಡದವರೂ ಬೇರೆ ಮೇಳ ಸೇರಿದರು. ಆ ಸಮಯದಲ್ಲಿ, 1993 ರಲ್ಲಿ ಪೂಕಳ ಲಕ್ಷ್ಮೀನಾರಾಯಣ ಭಟ್ಟರು ಸುರತ್ಕಲ್ ಮೇಳ ಸೇರಿದರು. ಶೇಣಿಯವರು ನಿವೃತ್ತರಾದ ನಂತರದ ಕಾಲದಲ್ಲಿ ವರದರಾಯ ಪೈಯವರು ಒಂದು ಹೊಸ ಯೋಜನೆಯ ಕಲ್ಪನೆ ಮಾಡಿದರು. ಪೌರಾಣಿಕ ಪ್ರಸಂಗಗಳನ್ನು ತುಳು ಭಾಷೆಯಲ್ಲಿ ಪ್ರದರ್ಶಿಸುವ ಯೋಜನೆ. ಆ ಕಾಲದಲ್ಲೇ, "ಸತ್ಯ ಹರಿಶ್ಚಂದ್ರ, ನಳ ದಮಯಂತಿ, ಶನೀಶ್ವರ ಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ಸಾಧ್ವಿ ಸದಾರಮೆ, ಪಾಪಣ್ಣ ವಿಜಯ, ಸತಿ ಶೀಲವತಿ ಮುಂತಾದ ಪ್ರಸಂಗವನ್ನು ತುಳು ಭಾಷೆಯಲ್ಲಿ ಪ್ರದರ್ಶಿಸಲು ಆರಂಭಿಸಿದರು. ಈ ಅವಧಿಯಲ್ಲಿ ಅಗರಿ ರಘುರಾಮ ಭಾಗವತರು ನಿವೃತ್ತರಾದ ಕಾರಣ, ಪದ್ಯಾಣ ಗಣಪತಿ ಭಟ್ಟರು ಪ್ರಧಾನ ಭಾಗವತರಾಗಿ ಮಿಂಚಿದರು. ಪೂಕಳರವರ ಹರಿಶ್ಚಂದ್ರ, ನಳ, ವಿಕ್ರಮಾದಿತ್ಯ, ಶಿವರಾಮ ಜೋಗಿಯವರ ವಿಶ್ವಾಮಿತ್ರ, ಶನೀಶ್ವರ, ಋತುಪರ್ಣ, ಬಪ್ಪಬ್ಯಾರಿ, ರಮೇಶಾಚಾರ್ಯರ ಚಂದ್ರಮತಿ, ದಮಯಂತಿ, ಗುಣಸುಂದರಿ ಮುಂತಾದ ಪಾತ್ರಗಳು, ವೇಣೂರು ಸುಂದರ ಆಚಾರ್ಯರ ಬಾಹುಕ, ಪಾಪಣ್ಣ, ಚಿತ್ರಾಂಗ ಪಾತ್ರಗಳು ವಿಜೃಂಭಿಸಿದವು. ಪೂಕಳರ ಕೋಟಿ, ಜೋಗಿಯವರ ಚೆನ್ನಯ ಪಾತ್ರಗಳು ಹೊಸ ಸಂಚಲನ ಮೂಡಿಸಿತು. ಉಜ್ರೆ ನಾರಾಯಣ, ಸಿದ್ದಕಟ್ಟೆ ಪದ್ಮನಾಭ ಶೆಟ್ಟಿಗಾರ್, ರಾಧಾಕೃಷ್ಣ ನಾವುಡ, ಧರ್ಮಸ್ಥಳ ಗೋಪಾಲ ಭಟ್, ವೇಣೂರು ಭಾಸ್ಕರ ಆಚಾರ್ಯ, ವೇಣೂರು ಸದಾಶಿವ ಆಚಾರ್ಯ, ಪೆರ್ಲ ಜಗನ್ನಾಥ ಶೆಟ್ಟಿ, ಹರಿಯಪ್ಪ ಶೆಣೈ, ಕೇದಿಗೆ ರತ್ನಾಕರ ರಾವ್, ಎಂ.ಟಿ.ಎಸ್.ಕುಲಾಲ್ ಮುಂತಾದವರು ಸುರತ್ಕಲ್ ಮೇಳದಲ್ಲಿ ಸೇವೆ ಸಲ್ಲಿಸಿದ್ದಾರೆ. ಇದೇ ಅವಧಿಯಲ್ಲಿ ತುಳುನಾಡಿನ ಪಾಡ್ದನ ಆಧರಿತ ಕಥೆಯಾದ "ತುಳುನಾಡ ಬಲಿಯೇಂದ್ರ" ಪ್ರಸಂಗವು ಸುರತ್ಕಲ್ ಮೇಳದಲ್ಲಿ ತುಂಬಾ ಯಶಸ್ಸನ್ನು ಗಳಿಸಿತು. 1996 ರಲ್ಲಿ ರಘು ಗುರುಪುರವರು ರಚಿಸಿದ "ಶ್ವೇತ ಪೌರ್ಣಮಿ" ಪ್ರಸಂಗವು ಅತ್ಯಂತ ಯಶಸ್ವಿಯಾಗಿ ಪ್ರದರ್ಶನಗೊಂಡಿತ್ತು .

ಇತ್ತೀಚೆಗೆ ಯುವ ಭಾಗವತರಾಗಿ ಸುಪ್ರಸಿದ್ಧರಾಗಿರುವ ರವಿಚಂದ್ರ ಕನ್ನಡಿಕಟ್ಟೆಯವರು ಮೂಲತಃ ಸುರತ್ಕಲ್ ಮೇಳದಲ್ಲಿ ಮುಮ್ಮೇಳದ ಬಾಲ ಕಲಾವಿದರಾಗಿ ಸೇರಿದ್ದರು. ಆದರೆ, ರವಿಚಂದ್ರರ ಕಂಠ ಗಮನಿಸಿದ, ಮೇಳದ ಪ್ರಧಾನ ಹಾಗೂ ಸುಪ್ರಸಿದ್ಧ ಭಾಗವತರಾದ ಪದ್ಯಾಣ ಗಣಪತಿ ಭಟ್ಟರು, ಅವರನ್ನು ಶಿಷ್ಯರಾಗಿ ಸ್ವೀಕರಿಸಿ, ಇಂದು ಕನ್ನಡಿಕಟ್ಟೆಯವರು ಸುಪ್ರಸಿದ್ಧ ಭಾಗವತರಾಗಿದ್ದಾರೆ. ಸುರತ್ಕಲ್ ಮೇಳದಲ್ಲಿ ಮೆನೇಜರ್ ಆಗಿ ದೀರ್ಘಾವಧಿಯ ಸೇವೆ ಸಲ್ಲಿಸಿದವರು ಐತಪ್ಪನವರು. ಮೈಕ್ ಪ್ರಚಾರಕರಾಗಿ ವಿಶ್ವನಾಥರು ಸೇವೆ ಸಲ್ಲಿಸಿದ್ದಾರೆ .ಸುರತ್ಕಲ್ ಮೇಳದಲ್ಲಿ ದುರ್ಗಾದಾಸ್ ಎಂಬವರು ಹಗಲು ಹೊತ್ತಿನಲ್ಲಿ ತುಳು ಯಕ್ಷಗಾನದ ಪೋಷಾಕಿನಲ್ಲಿ ನಡೆದುಕೊಂಡೇ ಮೈಕಾ ಮೂಲಕ ಪ್ರಚಾರ ಮಾಡುವ ಚಂದವೇ ತುಂಬಾ ಆಕರ್ಷಣೆಯಾಗಿತ್ತು. ದುರದ್ರಷ್ಟವಶಾತ್, ಈ ದುರ್ಗಾದಾಸರು ವಾಹನ ಅಪಘಾತದಲ್ಲಿ ನಿಧನರಾದುದೊಂದು ದೊಡ್ಡ ದುರಂತ. ಸುರತ್ಕಲ್ ಮೇಳದ ದೈನಂದಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದವರು ಕಸ್ತೂರಿ ವಾಸುದೇವ ಪೈಯವರ ಸುಪುತ್ರರಾದ ಕಸ್ತೂರಿ ಕಮಲಾಕ್ಷ ಪೈಗಳು. ಕಮಲಾಕ್ಷ ಪೈಯವರು ವರದರಾಯ ಪೈಯವರ ಬಲಗೈಯಂತಿದ್ದು ಮೇಳವನ್ನು ಸಮರ್ಥವಾಗಿ ನಿರ್ವಹಿಸಿದವರು. ಸುರತ್ಕಲ್ ಮೇಳದ ಔನ್ನತ್ಯಕ್ಕೆ ದೊಡ್ಡ ಪಾತ್ರ ನಿರ್ವಹಿಸಿದವರು ಕಮಲಾಕ್ಷ ಪೈಗಳೂ ಹೌದು ಎಂಬುದನ್ನು ಮರೆಯುವ ಹಾಗಿಲ್ಲ. ಸುಪ್ರಸಿದ್ದತೆಯ ಉತ್ತುಂಗ ಶಿಖರದಲ್ಲಿ ಇದ್ದ ಸುರತ್ಕಲ್ ಮೇಳವು 2000 ನೇ ಇಸವಿಯಂದು ತನ್ನ ಐದು ದಶಕಗಳಿಗೂ ಮೀರಿದ ತನ್ನ ತಿರುಗಾಟ ನಿಲ್ಲಿಸಿತು. ಇದಕ್ಕೆ ಕಾರಣವಂತೂ ಅಸ್ಪಷ್ಟವಾಗಿದೆ. ಬೇರೆ ಮೇಳದ ಯಜಮಾನರು ಸುರತ್ಕಲ್ ಮೇಳವನ್ನು ಖರೀದಿಸಲು ಪ್ರಯತ್ನ ಪಟ್ಟರೂ ವರದರಾಯ ಪೈಗಳು ನೀಡಿದ್ದೂ ಇಲ್ಲ. ಘಟ್ಟ ಪ್ರದೇಶಗಳಲ್ಲಿ "ಮಹಾಮ್ಮಾಯೀ ಮೇಳ" ಎಂದೇ ಪ್ರಸಿದ್ಧವಾಗಿದ್ದು, ಅಪಾರ ಜನಪ್ರಿಯತೆ



ಎಂ.ಶಾಂತರಾಮ ಕುಡ್ವ

ಗಳಿಸಿದ್ದ, ಸುರತ್ಕಲ್ ಮೇಳದವರ ಆ ಕಾಲದ ಟಿಕೆಟ್ ಕಲೆಕ್ಷನ್ ಗೋಣಿ ಚೀಲಗಳಲ್ಲಿ ತುಂಬಿಸುವಷ್ಟಾಗಿತ್ತು ಎಂಬುದು ಸುರತ್ಕಲ್ ಮೇಳದ ಜನಪ್ರಿಯತೆಯನ್ನು ಸಾರುತ್ತದೆ. ಸುರತ್ಕಲ್ ಮೇಳದವರು ಪ್ರತೀವರ್ಷ, ಘಟ್ಟ ಪ್ರದೇಶಗಳಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ಯಕ್ಷಗಾನ ಪ್ರದರ್ಶನ ನೀಡುತ್ತಿತ್ತು. ಸುರತ್ಕಲ್ ಮೇಳದಲ್ಲಿ ಒಮ್ಮೆಯಾದರೂ ತಿರುಗಾಟ ನಡೆಸಬೇಕೆಂಬುದು, ಅಂದಿನ ಕಾಲದ ಸುಪ್ರಸಿದ್ಧ ಕಲಾವಿದರ ಆಶೆಯೂ ಆಗಿತ್ತು.

ಸುರತ್ಕಲ್ ಮೇಳದ ಯಜಮಾನರಾದ ಕಸ್ತೂರಿ ವರದರಾಯ ಪೈಗಳು ನನ್ನ ತುಂಬಾ ಮೆಚ್ಚಿನ ವ್ಯಕ್ತಿ. ನನಗಿಂತ ಎಷ್ಟೋ ವರ್ಷಗಳ ಹಿರಿಯರಾಗಿದ್ದರೂ ನನ್ನನ್ನು "ಕುಡ್ವಮಾಮು" ಎಂದೇ ಸಂಭೋಧಿಸುವ ವಿಶಿಷ್ಟ ವ್ಯಕ್ತಿತ್ವ ಪೈಗಳದ್ದು. ಮೇಳದ ಹೊಸ ಪ್ರಸಂಗದ ಬಗ್ಗೆ, ಕಲಾವಿದರ ನಿರ್ವಹಣೆಯ ಬಗ್ಗೆ ನನ್ನಲ್ಲಿ ಯಾವಾಗಲೂ ಚರ್ಚಿಸುತ್ತಿದ್ದರು. ನಾನು ಏನಾದರೂ ಬದಲಾವಣೆ, ತಿದ್ದುಪಡಿ ಹೇಳಿದರೆ, ಕೂಡಲೇ ಸ್ಪಂದಿಸುತ್ತಿದ್ದರು. ಮೇಳದ ಪ್ರದರ್ಶನವನ್ನು ಪ್ರೇಕ್ಷಕರ ಸಾಲಿನಲ್ಲಿ ಕುಳಿತು, ವೀಕ್ಷಿಸಿ, ಹತ್ತಿರದ ಪ್ರೇಕ್ಷಕರು ಏನಾದರೂ, ವಿಮರ್ಶೆ ಮಾಡಿದರೆ ಅದನ್ನು ಮುಂದಿನ ಪ್ರಯೋಗದಲ್ಲಿ ಅಳವಡಿಸುವ ವ್ಯವಹಾರ ಕೌಶಲ್ಯ ಪೈಯವರಲ್ಲಿತ್ತು. ಮೇಳದ ಎಲ್ಲಾ ಕಲಾವಿದರಲ್ಲೂ ಅತಿಯಾದ ಪ್ರೀತಿ, ಮಮಕಾರ ಹೊಂದಿದ್ದ ವಿಶಿಷ್ಟ ವ್ಯಕ್ತಿತ್ವ ಪೈಗಳದ್ದು. ಶೇಣಿಯವರು ಯಾವಾಗಲೂ ನನ್ನಲ್ಲಿ ಹೇಳುತ್ತಿದ್ದ ಮಾತೆಂದರೆ "ಬೇರೆ ಮೇಳಗಳಲ್ಲಿ ಇರುವುದು ಧನಿಗಳು, ಆದರೆ, ಸುರತ್ಕಲ್ ಮೇಳದಲ್ಲಿ ಇರುವವರು ಯಜಮಾನರು". ಅಂದರೆ ಕಲಾವಿದರೆಲ್ಲರಲ್ಲೂ ಸಮಾನ ಪ್ರೀತಿ, ಗೌರವ ಹೊಂದಿದ್ದರು ಎಂಬ ತಾತ್ಪರ್ಯ. ಇಂದು ಸುರತ್ಕಲ್ ಮೇಳ ಇಲ್ಲದಿದ್ದರೂ, ಸುರತ್ಕಲ್ ನ ಶ್ರೀ ಮಹಾಮ್ಮಾಯೀ ದೇವಸ್ಥಾನದಲ್ಲಿ ಪ್ರತೀ ತಿಂಗಳ ಮೊದಲಿನ ಶುಕ್ರವಾರ ಯಕ್ಷಗಾನ ತಾಳಮದ್ದಳೆ ವರದರಾಯ ಪೈಗಳ ಸುಪುತ್ರರಾದ ಅರುಣ್ ಪೈಗಳ ನೇತೃತ್ವದಲ್ಲಿ ಜರುಗುತ್ತಿದೆ. ವರದರಾಯ ಪೈ ಸ್ಮರಣಾರ್ಥ ಪ್ರತೀವರ್ಷ ಸುರತ್ಕಲ್ ಮೇಳದಲ್ಲಿ ತಿರುಗಾಟ ನಡೆಸಿರುವ ಹಾಗೂ ಹಿರಿಯ ಕಲಾವಿದರಿಗೆ ಸಂಮಾನಿಸುವ ಪರಿಪಾಠ ಇಂದಿಗೂ ಜರುಗಿಸುತ್ತಿದ್ದಾರೆ.

***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

---

## ಕಳಚಿದ ಕಪ್ಪು ಮುಂಡಾಸಿನ ಕೊಂಡಿ–ಅಗಲಿದ ಬಡಗಿನ ಕಪ್ಪು ಮುಂಡಾಸು ಖ್ಯಾತಿಯ ಆಲೂರು ತೇಜ




**ಬ**ಡಗುತಿಟ್ಟಿನ ರಂಗಭೂಮಿಯ ಪರಂಪರಾಗತ ಕಲಾಶೈಲಿಯ ಅಗ್ರಮಾನ್ಯ ಕಲಾವಿದರಾಗಿ ಪ್ರಸಿದ್ದ ಕಪ್ಪು ಮುಂಡಾಸಿನ ಕಲಾವಿದರೆಂದೇ ಗುರುತಿಸಲ್ಪಟ್ಟ ಸುಮಾರು 76 ವರ್ಷ ಪ್ರಾಯದ ಆಲೂರು ತೇಜನವರು ವಿಧಿವಶರಾಗಿ ಇಂದಿಗೆ ವರ್ಷ 5 ಸಂದಿದೆ. ಆದರೆ ಅವರ ನೆನಪು ಬಡಗುತಿಟ್ಟಿನ ಪರಂಪರೆಯ ಯಕ್ಷಗಾನದ ಪ್ರೇಕ್ಷಕರಿಗೆ ಸದಾ ಹಸಿರು. ಅವರ ಅಗಲುವಿಕೆಯಿಂದ ನಡುಪ್ರಾಂತ್ಯದ ಒಂದು ವೈವಿಧ್ಯಮಯವಾದ ಹಾರಾಡಿಯ ಕಪ್ಪುಮುಂಡಾಸಿನ ಪರಂಪರೆಯ ಕೊಂಡಿಯೊಂದು ಕಳಚಿದಂತಾಗಿದೆ, ಆದರೆ ಅವರ ತೀರಾ ಹತ್ತಿರದ ಮೊಮ್ಮಗ ವಿಜಯ ಮುದ್ದುಮನೆ ಇವರು ಸದ್ಯದ ಮಂದಾರ್ತಿ ಮೇಳದ ಪುಂಡುವೇಷದಾರಿಯಾಗಿದ್ದು ನಡು ಬಡಗಿಗೆ ಮುಂದಿನ ಆಶಾಕಿರಣ.

ಕುಂದಾಪುರ ತಾಲೂಕು ಮಾರಣಕಟ್ಟೆ ಸಮೀಪ ಆಲೂರು ಎಂಬಲ್ಲಿ 1943ರಲ್ಲಿ ನಾಗಯ್ಯ ಮತ್ತು ವೆಂಕಿ ದಂಪತಿಗಳ ಬಡ ಮೊಗವೀರ ಕುಟುಂಬದಲ್ಲಿ ಜನಿಸಿದ ತೇಜನವರು ನಾಲ್ಕನೇ ತರಗತಿ ವಿದ್ಯಾಭ್ಯಾಸ ಪಡೆದು ಬಡಗಿನ ಮಟಪಾಡಿ ಶೈಲಿಯ ಸಾರ್ವತ್ರಿಕ ಗುರು ವೀರಭದ್ರ ನಾಯ್ಕರಲ್ಲಿ ಹೆಜ್ಜೆಗಾರಿಕೆ ಕಲಿತು ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆ ಕಟ್ಟಿದರು. ಮರವಂತೆ ನರಸಿಂಹ ದಾಸ ಗುಂಡ್ಮಿ ಸದಾನಂದ ಐತಾಳರಂತಹ ಹಿಮ್ಮೇಳ ವೀರಭದ್ರ ನಾಯ್ಕ್, ವಂಡ್ಸೆ ನಾರಾಯಣ ಗಾಣಿಗ, ಅರಾಟೆ ಮಂಜುನಾಥ, ಶಿರಿಯಾರ ಮಂಜು ನಾಯಕ್, ಉಡುಪಿ ಬಸವ, ಮೊಳಹಳ್ಳಿ ಹೆರಿಯ, ಪೆರ್ಡೂರು ರಾಮ ಮುಂತಾದ ಘಟಾನುಘಟಿ ಕಲಾವಿದರೊಂದಿಗೆ ಪಳಗಿ ಪರಿಪೂರ್ಣ ಮುಂಡಾಸು ವೇಷಧಾರಿಯಾಗಿ ಪ್ರಸಿದ್ದರಾದರು. ವೃಷಕೇತು, ಪ್ರದ್ಯುಮ್ನ, ದೇವಿಮಹಾತ್ಮೆಯ ವಿದ್ಯುನ್ಮಾಲಿ, ಮೀನಾಕ್ಷಿ ಕಲ್ಯಾಣದ ಶೂರಸೇನ, ಶ್ವೇತಕುಮಾರದ ಲೋಹಿತನೇತ್ರ ಮುಂತಾದ ಅವರ ಮುಂಡಾಸು ವೇಷಗಳು ಬಹುಬೇಗ ಪ್ರಸಿದ್ದಿ ಪಡೆದವು, ಅವರಿಗೆ ವಿಶೇಷವಾದ ಕೀರ್ತಿ ತಂದಿಟ್ಟ ಪಾತ್ರ ಅಭಿಮನ್ಯು ಕಾಳಗ. ಕಪ್ಪುಮುಂಡಾಸಿನ ಕೋಟೆ ಕರ್ಣ. ಹಾರಾಡಿ ಶೈಲಿಯಲ್ಲಿ ಎಡಬಲ ಭುಜಗಳು ಒಂದೇ ರೇಖೆಯಲ್ಲಿ ಇರುವ ಹಾಗೆ ಕಟ್ಟುಮೀಸೆಯಿಂದ ಕಂಗೊಳಿಸುವ ಸಾಂಪ್ರದಾಯಿಕವಾಗಿ ಬರೆದ ಗಲ್ಲಗಳಿಂದ ಕೂಡಿದ ಅವರ ಕೋಟೆ ಕರ್ಣನ ವೇಷವನ್ನು ನೋಡುವುದೇ ಕಣ್ಣಿಗೆ ಹಬ್ಬ. ಈಗಿನಂತೆ ಪುನಾರಾವರ್ತನೆಯೊಂದಿಗೆ ನಿಧಾನವಾಗಿ ಆದಿತಾಳ–ಏಕ–ಕೋರೆ ತಾಳ ಬಳಸದೆ ವೀರರಸದಲ್ಲೇ ಅಭಿಮನ್ಯುವನ್ನು ತತ್ತತ್ಯೆಯೊಂದಿಗೆ "ಎಲವೋ ಬಾಲಕನೆ ಕೇಳು" ಎಂದು ವೀರರಸದಲ್ಲೇ ಮಾತನಾಡಿಸುವ ಪರಿ ನೋಡುಗರಿಗೆ ಮೈನವಿರೇಳಿಸುತಿತ್ತು. ಸುಮಾರು ಐದುವರ್ಷ ಮಾರಣಕಟ್ಟೆ ಮೇಳದಲ್ಲಿ ತಿರುಗಾಟ ಮಾಡಿದ ಅವರು ಮತ್ತೆ ಹಿಂದಿರುಗಿ ನೋಡಲಿಲ್ಲ. ತೇಜನವರ ಸುದೀರ್ಘ 23 ವರ್ಷದ ಸೇವೆ ಶ್ರೀ ಮಂದಾರ್ತಿ ಮೇಳದಲ್ಲಿ. ಅದೂ ಮಂದಾರ್ತಿ ಮೇಳಕ್ಕೆ ಹರಕೆ ಆಟಗಳ ಕೊರತೆ ಇದ್ದ ಕಾಲದಲ್ಲಿ. ಹೆಗ್ಗುಂಜೆ ಭೋಜರಾಜ ಹೆಗಡೆಯವರ ಯಜಮಾನಿಕೆಯಲ್ಲಿ ಮೇಳಕ್ಕೆ ಹರಕೆ ಆಟದ ಕೊರತೆ ಇದ್ದು ಕಾಡಿಬೇಡಿ ಆಟ ಮಾಡಬೇಕಿದ್ದ ಕಾಲದಲ್ಲಿ ಭೋಜರಾಜ ಹೆಗ್ಡೆಯವರ ಹೆಗಲಿಗೆ ಹೆಗಲುಕೊಟ್ಟು ಅವರ ಮ್ಯಾನೇಜರ್ ಆಗಿ ಆಟ ಬುಕ್ಕಿಂಗ್ ಮಾಡುವ ಕಾಯಕವನ್ನು ಹಗಲಿಗೆ ಮಾಡಿ ರಾತ್ರಿ ವೇಷ ಮಾಡಿ ದೀರ್ಘಕಾಲ ಹೆಗಡೆಯವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಕೇವಲ ಒಂದು ಮೇಳಕ್ಕೆ ಆಟ ಸಿಗದಿರುವ ಪರಿಸ್ಥಿತಿ ಇದ್ದು ತೇಜನವರು ಮಳೆಗಾಲದಲ್ಲಿ ಆಟ ಆಡಿಸುವವರ ಮನೆಗೆ ಹೋಗಿ ಅಲ್ಲಿನ ಪರಿಸ್ಥಿತಿ ತಿಳಿದು ಆಟ ಬುಕ್ಕಿಂಗ್ ಮಾಡುತಿದ್ದರು, ತಿರುಗಾಟದ ಸಮಯದಲ್ಲಿ ಆಟ ಆಡಿಸಲು ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಿರುವ ಬಡ ಹರಕೆದಾರರಲ್ಲಿ ಒಂದಿಷ್ಟೂ ವೀಳ್ಯ ಪಡೆಯದೇ ಬಾಕಿ ಹಣವನ್ನು ಮಳೆಗಾಲದಲ್ಲಿ ಪಡೆದ ಉದಾಹರಣೆಗಳು ಆ ಕಾಲದಲ್ಲಿತ್ತು. ಆಟದ ಕೊರತೆಯನ್ನು ತುಂಬಿಸಲು ಯಕ್ಷಲೋಕ ವಿಜಯ, ರೂಪಶ್ರೀ, ರತ್ನಶ್ರೀ, ಹರ್ಷವರ್ದನ ಚರಿತ್ರೆ, ಪುಷ್ಪವೇಣಿ ಪರಿಣಯ ಮುಂತಾದ ಆದುನಿಕ ಪ್ರಸಂಗಗಳು ಇವರ ಕಾಲದಲ್ಲಿ ಶ್ರೀ ಮಂದಾರ್ತಿ ಮೇಳದಲ್ಲಿ ಪ್ರದರ್ಶಿಸಲ್ಪಟ್ಟವು. ಹಗಲು ಮೇಳದ ಆಟ ಬುಕ್ಕಿಂಗ್ ಹೊಣೆಗಾರಿಕೆಯಿದ್ದರೂ ರಾತ್ರಿ ದೇವಿ ಮಹಾತ್ಮೆಯ ಮದುಕೈಟಭ, ವೀರಮಣಿ, ಶಲ್ಯ, ತಾಮ್ರಧ್ವಜ,

ರತಿ ಕಲ್ಯಾಣದ ಕೌಂಡ್ಲೀಕ, ಮುಂತಾದ ಅವರ ಮುಂಡಾಸು ವೇಷಗಳು ಪ್ರೇಕ್ಷಕರನ್ನು ರಂಜಿಸುತಿದ್ದವು. ನೆಲ್ಲೂರು ಮರಿಯಪ್ಪ ಆಚಾರ್ ಮತ್ಯಾಡಿ ನರಸಿಂಹ ಶೆಟ್ಟಿ, ಸುರಗಿಕಟ್ಟೆ ಬಸವ ಗಾಣಿಗ, ಹರಾಡಿ ಅಣ್ಣಪ್ಪ ಗಾಣಿಗ, ತೀರ್ಥಳ್ಳಿ ಚಂದ್ರಾಚಾರಿ, ಮುಂತಾದವರ ಘಟಾನುಘಟಿಗಳ ಹಿಮ್ಮೇಳ, ಕೋಡಿ ಶಂಕರ ಗಾಣಿಗ, ಉಡುಪಿ ಬಸವ, ಮೊಳಹಳ್ಳಿ ಹೆರಿಯ, ಮಜ್ಜಿಗೆಬೈಲು ಆನಂದ ಶೆಟ್ಟಿ, ಹೆರಂಜಾಲು ಸುಬ್ಬಣ್ಣ, ಹೆದ್ದೂರು ಚಂದ್ರಾಚಾರಿ, ಮಡಮಕ್ಕಿ ಜಯರಾಮ ಶೆಟ್ಟರಿಂದ ಬಯಲಾಟದ ಅಗ್ರಮಾನ್ಯರಿಂದ ಶ್ರೀಮಂತವಾದ ಅಂದಿನ ಮಂದಾರ್ತಿ ಮೇಳದಲ್ಲಿತೇಜನವರ ಹಂಸ ಧ್ವಜ, ಪರಶುರಾಮ, ಭೀಷ್ಮ, ಕರ್ಣ, ಋತುಪರ್ಣ ಮೊದಲಾದ ಎರಡನೇ ವೇಷ, ಪುರುಷವೇಷಗಳಲ್ಲೂ ಸೈ ಎನಿಸಿದ್ದರು. ಡಾ. ಶಿವರಾಮ ಕಾರಂತರ ಬ್ಯಾಲೆಯಲ್ಲೂ ವಿದೇಶ ಸಂಚಾರ ಮಾಡಿದ ಅವರು ಅಲ್ಲಿ ಕೋರೆ ಮುಂಡಾಸಿನ ಕಿರಾತ ಮತ್ತು ಮುಂಡಾಸು ವೇಷಗಳಿಗೆ ಜೀವ ತುಂಬಿದ್ದರು. ಯಕ್ಷಗಾನದ ಗುರುವಾಗಿ ಅನೇಕ ಶಿಷ್ಯರನ್ನು ತರಬೇತು ಗೊಳಿಸಿದ್ದ ಅವರ ಶಿಷ್ಯ ಕೋಟಿಗಳಲ್ಲಿ ಒಬ್ಬರಾದ ಆಲೂರು ಸುರೇಂದ್ರರು ಶ್ರೀ ಮಾರಣಕಟ್ಟೆ ಮೇಳದ ಪ್ರಧಾನ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವೃತ್ತಿ ಜೀವನದಲ್ಲಿ ಅನೇಕ ಪ್ರಶತಿ ಪುರಸ್ಕಾರಗಳಿಗೆ ಪಾತ್ರರಾದ ಅವರಿಗೆ ಶ್ರೀ ಮಂದಾರ್ತಿ ಕ್ಷೇತ್ರದ ಹಾರಾಡಿ ರಾಮಗಾಣಿಗ ನೆನಪಿನ ಪುರಸ್ಕಾರ, ಮಾರಣಕಟ್ಟೆ ಮೇಳದ ಸನ್ಮಾನ, ಉಡುಪಿ ಯಕ್ಷಗಾನ ಕಲಾರಂಗ ಪ್ರಶಸ್ತಿ ಸಹಿತ ಅನೇಕ ಸನ್ಮಾನಗಳು ದೊರೆತಿವೆ.



**ಆಲೂರು ತೇಜನವರು**



ತೆಂಕಿನ ಸುರತ್ಕಲ್ ಮೇಳದಲೂ ತಿರುಗಾಟ ಮಾಡಿದ ಅವರು ಕಮಲಶಿಲೆ, ಕೊಲ್ಲೂರು, ಇಡಗುಂಜಿ, ಮಾರಣಕಟ್ಟೆ, ಪೆರ್ಡೂರು ಹೀಗೆ 40 ವರ್ಷಗಳ ದೀರ್ಘಕಾಲದ ತಿರುಗಾಟ ಮಾಡಿ ಧನ್ಯತೆಯನ್ನೂ ಅಪಾರ ಜನಮನ್ನಣೆಯನ್ನೂ ಕಂಡ ಶ್ರೇಷ್ಠ ಕಲಾವಿದರ ಯಾದಿಯಲ್ಲಿ ಗುರುತಿಸಲ್ಪಡಬಹುದಾದ ಇವರು ಜೀವಿತದ ಕೊನೆಯವರೆಗೂ ಪತ್ನಿ ಏಳು ಮಂದಿ ಮಕ್ಕಳೊಂದಿಗೆ ಕೋಟೇಶ್ವರ ಸಮೀಪ ಬೀಜಾಡಿಯಲ್ಲಿ ವಾಸವಾಗಿದ್ದರು. ಸುದೀರ್ಘಕಾಲ ಶ್ರೀ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸಿ ಕ್ಷೇತ್ರದ ಅಭಿಮಾನಿಯಾದ ತೇಜನವರ ನಿಧನದಿಂದ ಬಡಗುತಿಟ್ಟು ಶ್ರೇಷ್ಠ ಶ್ರೇಣಿಯ ಮುಂಡಾಸು ಕಲಾವಿದನನ್ನು ಕಳೆದು ಕೊಂಡಂತಾಗಿದೆ.

***ಲೇಖಕರು– ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ***

## <u>ಹದಿನೇಳನೆಯ ಶತಮಾನದ ಯಕ್ಷಗಾನ ಪ್ರಸಂಗಗಳು</u>



**ಉಮೇಶ ಶಿರೂರು**

ಇಲ್ಲಿಯವರೆಗಿನ ಸಂಶೋಧನೆಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಹತ್ತಿರದ ಕಂಚೀಮನೆ ಎಂಬಲ್ಲಿ ದೊರೆತ ಆದಿಪರ್ವ (1300 –1350) ಪ್ರಥಮ ಯಕ್ಷಗಾನ ಪ್ರಸಂಗ ಕೃತಿ. ನಂತರ ಹದಿನಾರನೆಯ ಶತಮಾನದ ಕೊನೆಯಲ್ಲಿ ಅಥವಾ ಹದಿನೇಳನೆಯ ಶತಮಾನದ ಮೊದಲ ಭಾಗದಲ್ಲಿ ಯಕ್ಷಗಾನ ಪ್ರಸಂಗಗಳು ರಚನೆ ಅವಿಭಿಜಿತ ದಕ್ಷಿಣಕನ್ನಡ ಅದರಲ್ಲೂ ಉಡುಪಿ ಪ್ರದೇಶದಲ್ಲಿ ಪ್ರಾರಂಭವಾಗಿರುವುದನ್ನು ಯಕ್ಷಗಾನ ವಿದ್ವಾಂಸರು ಗುರುತಿಸುತ್ತಾರೆ. ಅಜಪುರದ ವಿಷ್ಣು ಅಥವಾ ವಾರಂಬಳ್ಳಿ ಈ ಪ್ರದೇಶದಲ್ಲಿ ಪ್ರಥಮವಾಗಿ ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವುದಾಗಿ ಡಾ.ಶಿವರಾಮ ಕಾರಂತರು ತಮ್ಮ ಯಕ್ಷಗಾನ ಬಯಲಾಟ ಕೃತಿಯಲ್ಲಿ ಹೇಳುತ್ತಾರೆ. ವಿಷ್ಣು ವಾರಂಬಳ್ಳಿ ವಿರಾಟಪರ್ವ, ಇಂದ್ರ ಕೀಲಕ ಮತ್ತು ಬಾಣಾಸುರ ಕಾಳಗ ಎನ್ನುವ ಮೂರು ಪ್ರಸಂಗ ಕೃತಿಗಳನ್ನು ರಚಿಸಿದ್ದಾನೆ. ಇವನ ಸ್ಥಳ ಉಡುಪಿ ಜಿಲ್ಲೆಯ ಬ್ರಹ್ಮಾವರ. ಕಾಲ 1550–1600. ಸುಮಾರು ಇದೇ ಸಮಯದಲ್ಲಿ ಕಾಸರಗೋಡಿನ ಕುಂಬ್ಳೆಯ ಪಾರ್ತಿ ಸುಬ್ಬ(ಕಾಲ 1560–1620) ಸುಮಾರು ಹತ್ತು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾನೆ. ಇನ್ನೊಬ್ಬ ಯಕ್ಷಗಾನ ಕವಿ ಧ್ವಜಪುರದ ನಾಗಪ್ಪಯ್ಯ (ಕಾಲ 1600–1650) ಚಂದ್ರಾವಳಿ, ನಳಚರಿತ್ರೆ, ಇಂದ್ರಕೀಲಕ, ಘಟೋತ್ಕಚ ಕಾಳಗ, ಸುಗಂಧಿಕಹರಣ, ಜಟಾಸುರವಧೆ ಮೊದಲಾದ ಪ್ರಸಂಗ ರಚನೆ ಮಾಡಿದ್ದಾನೆ. ಉಡುಪಿ ಸಮೀಪದ ಪಾಂಡೇಶ್ವರದ ಕವಿ ಪಾಂಡೇಶ್ವರ ವೆಂಕಟ(ಕಾಲ 1600–1650) ಕರ್ಣಾರ್ಜುನ ಕಾಳಗ ಪ್ರಸಂಗ ಕೃತಿ ರಚಿಸಿದ್ದಾನೆ. ರಾವಣೋದ್ಭವ ಮತ್ತು ರತಿಜನ್ಮ ಶಂಭರಾಸುರ ಕಾಳಗ ಎಂಬ ಎರಡು ಪ್ರಸಂಗಗಳು ನಗಿರಿಯ ಸುಬ್ಬ (ಕಾಲ 1623 ) ಕವಿಯಿಂದ ಬರೆಯಲ್ಪಟ್ಟಿದೆ. ನಿತ್ಯಾನಂದ ಅವಧೂತ (ಕಾಲ–1650) ರಿಂದ ರಚಿಸಲ್ಪಟ್ಟ ಕನಕಾಂಗಿ ಕಲ್ಯಾಣ ಬಹಳ ಪ್ರಸಿದ್ಧ ಪ್ರಸಂಗ ಕೃತಿ. ಹಳೆಮಕ್ಕಿ ರಾಮ (ಕಾಲ 1650) ಕವಿ ಕೃಷ್ಣಾರ್ಜುನ ಕಾಳಗ ಮತ್ತು ಮದಲಸಾ ಸ್ವಯಂವರ ಪ್ರಸಂಗಗಳನ್ನು ರಚಿಸಿದ್ದಾನೆ, ಆಗುಂಬೆ ಹತ್ತಿರದ ಹರಿಹರಪುರದ ಪರಮೇಶ್ವರ ಕವಿ (ಕಾಲ 1685) ಕಾಲನೇಮಿ ಕಾಳಗ, ಕರ್ಣಪರ್ವ, ಪ್ರಭಾವತಿ ಕಲ್ಯಾಣ, ಅಭಿಮನ್ಯು ಕಾಳಗ ರಚಿಸಿರುವುದಾಗಿ ತಿಳಿದು ಬರುತ್ತದೆ. ಇನ್ನೊಬ್ಬ ಕವಿ ಅಜಪುರದ ಸುಬ್ಬ(ಕಾಲ 1690 –1750 )ಪಾರಿಜಾತ ಪ್ರಸಂಗ ಮತ್ತು ರುಕ್ಮಿಣಿ ಸ್ವಯಂವರ ಪ್ರಸಂಗ ರಚಿಸಿದ್ದಾನೆ. ಹೀಗೆ ಹದಿನೇಳನೆಯ ಶತಮಾನದಲ್ಲಿ ಬಹಳಷ್ಟು ಯಕ್ಷಗಾನ ಪ್ರಸಂಗಗಳು ರಚಿಸಲ್ಪಟ್ಟು ಇಂದಿಗೂ ತಾಳಮದ್ದಳೆ ಮತ್ತು ಬಯಲಾಟ ಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಪ್ರಸಿದ್ದಿ ಪಡೆದಿವೆ. ಕೆಲವು ತಾಳೆಗರಿ ಹಸ್ತಪ್ರತಿಯ ಪ್ರಸಂಗಳು ಉಡುಪಿ ಜಿಲ್ಲೆ ಬೈಂದೂರು ತಾಲೂಕಿನ ಶಿರೂರು ಫಣಿಯಪ್ಪಯ್ಯನವರ ತಾಳೆಗರಿ ಸಂಗ್ರಹದಲ್ಲಿ ದೊರೆಕಿವೆ. ಈ ಎಲ್ಲಾ ಪ್ರಸಂಗಗಳ ಪ್ರತಿಗಳು ತಾಳೆಗರಿ ಹಸ್ತಪ್ರತಿ ರೂಪದ ಪ್ರಸಂಗ ಕೃತಿಗಳನ್ನು ನಂತರ ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ಪಂಡಿತರರಿಂದ ಪರಾಮರ್ಶಿಸಿ 1925 ರಿಂದ 1960ರವರೆಗೆ ಹಲವು ಆವೃತ್ತಿಗಳಲ್ಲಿ ಪ್ರಕಟಿಸಿ ಜನಪ್ರೀಯಗೊಳಿಸಿದ್ದಾರೆ. ಕೆಲವು ಪ್ರಸಂಗ ಕೃತಿಗಳನ್ನು ಮಂಗಳೂರಿನ ನಿತ್ಯಾನಂದ ಗ್ರಂಥಾಲಯದವರು ಕೂಡ ಪ್ರಕಟಿಸಿದ್ದಾರೆ. ನಂತರದ ದಿನಗಳಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸಂಪುಟ ರೂಪದಲ್ಲಿ ವಿವರವಾದ ಕವಿ ಕೃತಿ ಪರಿಚಯದೊಂದಿಗೆ ಪ್ರಕಟಿಸಿದ್ದಾರೆ.

***ಲೇಖಕರು– ಉಮೇಶ ಶಿರೂರು ಬೆಂಗಳೂರು 9448353910***

# ದಿನಕರ್ ನಡೂರು– ಯಕ್ಷ ಬದುಕಿನ ರಜತ ಸಂಭ್ರಮ

**ಪ್ರ**ಸ್ತುತ ಮಂದರ್ತಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ತ್ರೀ ವೇಷ ಕಲಾವಿದರಾದ **ದಿನಕರ್ ಕುಂದರ್ ನಡೂರು**ರವರು ತಮ್ಮ ಯಕ್ಷ ಜೀವನದ ಯಶಸ್ವಿ 25ನೇ ವರುಷದ ತಿರುಗಾಟವನ್ನು ಪೂರೈಸಿದ್ದಾರೆ. ಈ ಸಾರ್ಥಕ ಪಯಣದ ನೆನಪಿಗೆ ದಿನಕರ್ ನಡೂರ್ ಅವರ ಅಭಿಮಾನ ಬಳಗದವರು **'ರಜತ ವರ್ಷದ ಸಂಭ್ರಮ'** ಕಾರ್ಯಕ್ರಮವನ್ನು ಆಯೋಜಿಸಿದ್ದರು. ಎಪ್ರಿಲ್ 28ನೇ ತಾರೀಕಿನಂದು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ ಶ್ರೀ ಕ್ಷೇತ್ರ ಮಂದಾರ್ತಿಯ ರಥಬೀದಿಯಲ್ಲಿ ಅದ್ದೂರಿಯಾಗಿ ನಡೆದ ಕಾರ್ಯಕ್ರಮದಲ್ಲಿ ಇವರಿಗೆ ಯಕ್ಷ ದಿನಕರ ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿಠಲ ಶೆಟ್ಟಿಯವರು ವಹಿಸಿಕೊಂಡಿದ್ದರು. ನಾಡೋಜ ಜಿ. ಶಂಕರ್ ದೀಪ ಪ್ರಜ್ವಲನೆ ಮಾಡಿದರು. ಈ ಸಂದರ್ಭ ಕಲಾವಿದ ದಿನಕರ್ ನಡೂರ್ ಅವರಿಗೆ ರಜತ ಗೆಜ್ಜೆ ನೀಡಿ ಸನ್ಮಾನಿಸಲಾಯಿತು. ಶ್ರೀ ಕ್ಷೇತ್ರ ಮಂದಾರ್ತಿಯ ಅನುವಂಶಿಕ ಮೊಕ್ತೇಸರರಾದ ಧನಂಜಯ ಶೆಟ್ಟಿಯವರು ದಿನಕರ್ ನಡೂರ್ ರವರಿಗೆ ಬೆಳ್ಳಿ ಗೆಜ್ಜೆ ಪ್ರದಾನ ಮಾಡಿದರು. ಜೊತೆಗೆ ಕಲಾ ಜೀವನದ "ನೆನಪಿನ ಬುತ್ತಿ" ಪುಸ್ತಕ ಬಿಡುಗಡೆಗೊಳಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ನಡೂರ್ 'ಈ ಅಭಿನಂದನೆ ನನ್ನನ್ನು ಈ ಕ್ಷೇತ್ರದಲ್ಲಿ ಇನ್ನಷ್ಟು ಕಲಾಸೇವೆ ನಡೆಸಲು ಪ್ರೇರಣೆ ನೀಡಿದೆ' ಎಂದರು. ವೇದಿಕೆಯಲ್ಲಿ ಆನಂದ್ ಕುಂದರ್, ಡಾ. ತಲ್ಲೂರು ಶಿವರಾಂ ಶೆಟ್ಟಿ, ಕೃಷ್ಣಮೂರ್ತಿ ಮಂಜ, ಪಟ್ಲ ಸತೀಶ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ನಂತರ ಪಾವಂಜೆ ಮೇಳದವರಿಂದ ನಾಗಸಂಜೀವನ ಯಕ್ಷಗಾನ ಬಯಲಾಟ ನಡೆಯಿತು. ಮಂದಾರ್ತಿ ಮಾರಣಕಟ್ಟೆ ಕಮಲಶಿಲೆ ಮೇಳಗಳಲ್ಲಿ ತಿರುಗಾಟ ನಡೆಸಿದ ಇವರು ಮೋಹಿನಿ, ದೇವಿ, ತ್ರಿಲೋಕ ಸುಂದರಿ, ರಂಭೆ, ಶಶಿಪ್ರಭೆ, ಭ್ರಮರಕುಂತಳೆ, ಮೀನಾಕ್ಷಿ, ಯೋಜನಗಂಧಿ, ಪ್ರಭಾವತಿ, ಮಾಲಿನಿ ಪಾತ್ರಗಳಲ್ಲಿ ಹೆಸರು ಮಾಡಿದ್ದಾರೆ.










1980ರಲ್ಲಿ ಜನಿಸಿರುವ ಇವರ ತಂದೆ ಮಾಧವ ರಾವ್ (ದಿ. ಶಿರಿಯಾರ ಮಂಜು ನಾಯಕರ ತಮ್ಮ) ಹಾಗೂ ತಾಯಿ–ತುಂಗ ಮರಕಾಲ್ತಿ. ಉಡುಪಿ ಜಿಲ್ಲೆ ನಡೂರಿನ ಅಜ್ಜಿಮನೆ ಎಂಬಲ್ಲಿ ಜನಿಸಿದ ಇವರು 7ನೆ ತರಗತಿಯವರೆಗೆ ಶಾಲಾ ಶಿಕ್ಷಣವನ್ನು ಪೂರೈಸಿದ್ದಾರೆ. ಯಕ್ಷಗಾನದಲ್ಲಿ ಪ್ರಥಮವಾಗಿ ಹಿರಿಯಣ್ಣ ಶೆಟ್ಟಿಗಾರ್, ತಂತ್ರಾಡಿ ಇವರಿಂದ ಹೆಜ್ಜೆಗಾರಿಕ ಕಲಿತ ಇವರು ಯಕ್ಷಗಾನ ಕಲಾಕೇಂದ್ರ ಉಡುಪಿಯಲ್ಲಿ ಒಂದು ವರುಷದ ಅಭ್ಯಾಸ ನಡೆಸಿದ್ದಾರೆ. ಅಲ್ಲದೆ, ನೀಲಾವರ ಲಕ್ಷ್ಮೀನಾರಾಯಣಯ್ಯ, ಸಂಜೀವ ಸುವರ್ಣ, ಎ,ಪಿ,ಪಾಠಕ್, ಚಂದ್ರಹಾಸ ಪುರಾಣಿಕರಲ್ಲಿಯೂ ಯಕ್ಷಗಾನಾಭ್ಯಾಸ ಮಾಡಿದ್ದಾರೆ. ತಿರುಗಾಟದ ಅವಧಿಯಲ್ಲಿ ಹಿರಿಯ ಕಲಾವಿದರಾದ ಎಂ ,ಎ. ನಾಯಕ್, ನರಾಡಿ ಭೋಜರಾಜ್ ಶೆಟ್ಟಿ, ಆಜ್ರಿ ಗೋಪಾಲ, ರಮಾಕಾಂತ್ ಮಡಿವಾಳ, ಹೊಳೆಕೊಪ್ಪ ಜಯಾನಂದ, ದಿ. ಕಣ್ಣಿಮನೆ ಗಣಪತಿ ಭಟ್, ಭಾಗವತರಾದ ದಿ. ಸುಬ್ರಹ್ಮಣ್ಯ ಆಚಾರ್, ಸದಾಶಿವ ಅಮೀನ್, ಹೆರಂಜಾಲ್ ಗೋಪಾಲ ಗಾಣಿಗ, ನಾಗೇಶ್ ಕುಲಾಲ್, ಹಿರಿಯಣ್ಣ ಆಚಾರ್ಯ ಮೊದಲಾದವರೊಂದಿಗೆ ಒಡನಾಟವನ್ನು ಹೊಂದಿದ್ದು ಜ್ಞಾನಾರ್ಜನೆ ಮಾಡಿಕೊಂಡಿದ್ದಾರೆ. ಮಳೆಗಾಲದಲ್ಲಿ ಭಾಗವತರಾದ ಶ್ರೀ ಸದಾಶಿವ ಅಮೀನ್ ಕೊಕ್ಕರ್ಣೆಯವರ ಸಹಭಾಗಿತ್ವದಲ್ಲಿ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ ನಡೂರು, ಮಂದಾರ್ತಿ ಎನ್ನುವ ಸಂಸ್ಥೆಯ ಮೂಲಕ ಮುಂಬೈ, ಬೆಂಗಳೂರು, ಹೈದರಾಬಾದ್ ಸೇರಿದಂತೆ ಕರ್ನಾಟಕದ ಎಲ್ಲಾ ನಗರ ಪ್ರದೇಶಗಳಲ್ಲಿ ಯಕ್ಷಗಾನ ತಿರುಗಾಟ ನಡೆಸಿ ಪ್ರದರ್ಶನ ನೀಡಿದ್ದಾರೆ. ಇವರ ಯಕ್ಷಸೇವೆಗೆ ಆಭಿಮಾನಿಗಳಿಂದ ನೂರಾರು ಸನ್ಮಾನ ಪ್ರಶಸ್ತಿಗಳು ಸಂದಿವೆ. ಸದ್ಯ ಧರ್ಮಪತ್ನಿ ರೇಖಾರವರೊಂದಿಗೆ ದಾಂಪತ್ಯ ಜೀವನ ನಡೆಸುತ್ತಿದ್ದು ದೀಕ್ಷಿತ್ ಮತ್ತು ರಕ್ಷಿತಾ ಎಂಬ ಮುದ್ದಾದ ಮಕ್ಕಳನ್ನು ಹೊಂದಿದ್ದಾರೆ. ಯಕ್ಷಗಾನ ರಂಗದಲ್ಲಿ ಇವರ ಸಾಧನೆ, ಕೀರ್ತಿ ಇನ್ನಷ್ಟು ಎತ್ತರಕ್ಕೆ ಏರಲಿ ಎಂಬುದು ನಮ್ಮ ಆಶಯ. ರಜತ ವರ್ಷಾಚರಣೆಯ ಶುಭಾಶಯಗಳು..